ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳದ ತ್ರಿವೇಣಿ ಸಂಗಮದಲ್ಲಿ ಆದಿಚುಂಚನಗಿರಿ ಮಠಾಧೀಶ ಪೂಜ್ಯ ನಿರ್ಮಲಾನಂದನಾಥ ಸ್ವಾಮೀಜಿ, ಪೂಜ್ಯ ಪ್ರಸನ್ನಾನಂದನಾಥ ಸ್ವಾಮೀಜಿ, ಹರಿಹರ ಪಂಚಮಸಾಲಿ ಪೀಠದ ಪೂಜ್ಯ ವಚನಾನಂದ ಸ್ವಾಮೀಜಿ, ಚಿತ್ರದುರ್ಗದ ಶಿವಶರಣ ಮಾದಾರ ಚನ್ನಯ್ಯ ಗುರುಪೀಠದ ಪೂಜ್ಯ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಪೂಜ್ಯ ಕಬೀರಾನಂದ ಸ್ವಾಮೀಜಿ ಪುಣ್ಯಸ್ಥಾನದಲ್ಲಿ ಪಾಲ್ಗೊಂಡರು.

ಸಂಪುಟ : 46 ಸಂಚಿಕೆ : 20 ಮಾಘ ಕಲಿಯುಗಾಬ್ದ 5126 15–02–2025 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ಆಗಲೇಬೇಕಿದೆ ನೀರಿನ ಸದ್ಬಳಕೆ, ಮಿತಬಳಕೆ, ಮರುಬಳಕೆ

■ **ಸಹನಾ ಹೆಗಡೆ**

ಜೀವ ಜಲ ಎಂದು ಕರೆಸಿಕೊಳ್ಳುವ ನೀರು, ಜೀವಸಂಕುಲದ ಅಸ್ತಿತ್ವಕ್ಕೆ ಅತ್ಯಂತ ಅಗತ್ಯವಾದ ಅಂಶವಾಗಿದೆ. ನೀರಿಲ್ಲದ ಜೀವನವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ನಾವು ಕುಡಿಯಲಿಕ್ಕೆ ಅಥವಾ ಜೀವಂತ ಇರುವುದಕ್ಕೆ ಎಷ್ಟು ಪ್ರಮಾಣದ ನೀರು ಅಗತ್ಯವೋ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನಾವು ಬಳಸುವ ಎಲ್ಲಾ ವಸ್ತುಗಳ ತಯಾರಿಕೆಗೆ ಅಂದರೆ ಬಟ್ಟೆ ಯಂತ್ರೋಪಕರಣ ಮನೆಯ ವಾಹನ ಸೇರಿದಂತೆ ಪ್ರತಿ ವಸ್ತುಗಳ ತಯಾರಿಕೆಗೂ ಅನಿವಾರ್ಯ ಮನುಷ್ಯ ಮಾತ್ರವಲ್ಲದೆ ಗಿಡಮರಗಳು ಪ್ರಾಣಿ ಪಕ್ಷಿಗಳು ಜಲಚರಗಳು ಜೀವ ಸಂಕುಲದ ಅಸ್ತಿತ್ವ ನೀರಿನ ಮೇಲೆ ಅವಲಂಬಿತವಾಗಿದೆ. ಹೀಗೆ ಪ್ರಕೃತಿಯ ಚಕ್ರದಲ್ಲಿ ನಿರ್ಣಾಯಕ ಪಾತ್ರ ವಹಿಸುವ ನೀರಿನ ಅಗತ್ಯತೆ ಬಗ್ಗೆ ನಮಗೆಲ್ಲ ತಿಳಿದೇ ಇದೆ. ಇಷ್ಟೆಲ್ಲಾ ತಿಳಿದಿದ್ದರೂ ಸಹ ಜಲ ಸಂರಕ್ಷಣೆ ವಿಷಯ ಬಂದಾಗ ಜಲ ಸಂರಕ್ಷಣೆ ಜವಾಬ್ದಾರಿ ಸರ್ಕಾರದ್ದು, ಪರಿಸರ ಹಿತಾಸಕ್ತರದ್ದು, ಸ್ಥಳೀಯ ವ್ಯವಸ್ಥೆಯದ್ದೋ ಎಂದು ಕೈ ಚಾಚಿ ಕುಳಿತುಕೊಳ್ಳುವವರ ಸಂಖ್ಯೆಯೇ ಹೆಚ್ಚು. ನನ್ನ ಅಸ್ತಿತ್ವಕ್ಕೆ ಕಾರಣವಾದ ನೀರಿನ ಸಂರಕ್ಷಣೆಯಲ್ಲಿ ನನ್ನದೇ ಮುಖ್ಯ ಪಾತ್ರ ಎಂಬ ಜವಾಬ್ದಾರಿ ಪ್ರಸ್ತುತದಲ್ಲಿ ಕಾಣಿಸಿಕೊಳ್ಳುವುದು ತುಂಬಾ ವಿರಳ.

ವಾಸ್ತವದಲ್ಲಿ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಜಲವನ್ನು ಕೇವಲ ಒಂದು ದ್ರವ ವಸ್ತು ಎಂದಾಗಲಿ ಮತ್ತು ಜಲಮೂಲಗಳನ್ನು ಕೇವಲ ಒಂದು ಸ್ಥಳ ಎಂದು ಪರಿಗಣಿಸದೆ ಜಲ ಮತ್ತು ಜಲ ಮೂಲಗಳಲ್ಲಿ ದೈವ ಸ್ವರೂಪವನ್ನು ನೋಡಲಾಗಿದೆ. ಜಲ ಕೇವಲ ನಮಗೆ ಭೌತಿಕ ಸಂಪತ್ತಲ್ಲ ಅದು ಸೃಷ್ಟಿಯ ಮೂಲ. ಬೃಹದಾರಣ್ಯಕ ಉಪನಿಷತ್ತಿನಲ್ಲಿ 'ಸರ್ವಂ ಆಪಃ' ಎಂದರೆ ಜಲವೇ ಎಲ್ಲಾ ವಸ್ತುಗಳ ಮೂಲ ಎಂಬ ಉಲ್ಲೇಖವಿದೆ. ಸನಾತನ ಪರಿಭಾಷೆಯಲ್ಲಿ ಜೀವನಾಧಾರವಾಗಿರುವ ಅಂಶಗಳೆಲ್ಲವೂ ನಮಗೆ ಪೂಜನೀಯ ಮತ್ತು ಗೌರವಾರ್ಹ. ಈ ಪೂಜಾರ್ಹ ವಸ್ತುಗಳನ್ನು, ಅವಶ್ಯಕತೆಗೆ ಮೀರಿ ಉಪಭೋಗಿಸುವುದು ನಿಷಿದ್ಧವಾಗಿದೆ. 'ತೇನ ತ್ಯಕ್ತೇನ ಭುಂಜಿಥಾ' ಎಂದು ಈಶೋಪನಿಷತ್‌ನಲ್ಲಿ ನಮ್ಮ ಋಷಿಮುನಿಗಳು ಹೇಳಿದ್ದಾರೆ. ಪ್ರಕೃತಿ ಅಥವಾ ಪ್ರಕೃತಿಯಲ್ಲಿನ ಸಂಪತ್ತು ನಮಗೆ ಭೋಗದ ವಸ್ತುಗಳಲ್ಲ. ಪ್ರಕೃತಿಯ ಮುಖ್ಯ ಭಾಗವಾದ ಜಲ ನಮಗೆ ಆಧ್ಯಾತ್ಮಿಕತೆಯ ಸಾಧನ. ಯಾವುದೇ ಶುಭ ಕಾರ್ಯಗಳನ್ನು ಮಾಡುವಾಗ 'ಗಂಗೇಚ ಯಮುನೇಚೈವ ಗೋದಾವರಿ ಸರಸ್ವತಿ ನರ್ಮದೆ ಸಿಂಧು ಕಾವೇರಿ ಜಲಸ್ಮಿನ್ ಸನ್ನಿಧಿಂ ಕುರು' ಎಂದು ಪವಿತ್ರ ನದಿಗಳ ನೀರನ್ನು ಆವಾಹನೆ ಮಾಡುತ್ತೇವೆ. ಶುಭಕಾರ್ಯಗಳಿಗೆ ಮಾತ್ರವೇ ಅಲ್ಲದೆ ಮನುಷ್ಯನ ಜೀವನದ ಅಂತ್ಯದ ನಂತರ ಚಿತಾಭಸ್ಮವನ್ನು ಸಹ ಪವಿತ್ರ ಜಲದಲ್ಲಿ ವಿಸರ್ಜಿಸುವುದು ಸಂಪ್ರದಾಯ. ಹಾಗೆ ನೋಡಿದಾಗ ಇಹದಲ್ಲಿ ಮಾತ್ರವಲ್ಲದೆ ಮೋಕ್ಷ ಸಾಧನೆಗೂ ನಾವು ಅವಲಂಬಿಸಿರುವುದು ಪವಿತ್ರ ಜಲವನ್ನೇ ಸರಿ. ಪೂರ್ವಜರ ಮೋಕ್ಷ ಪ್ರಾಪ್ತಿಗಾಗಿ ಗಂಗೆಯನ್ನು ಭೂಮಿಗೆ ತರಲು ಭಗೀರಥ ಪಟ್ಟ ಪ್ರಯತ್ನ ನಮಗೆಲ್ಲ ತಿಳಿದೇ ಇದೆ. ಉಷಃ ಕಾಲದಲ್ಲಿ ಸೂರ್ಯ ದೇವರಿಗೆ ಜಲದ ಅರ್ಘ್ಯವನ್ನು ನೀಡದೆ ಆಹಾರ ಸೇವನೆ ಮಾಡದೇ ಇರುವ ಎಷ್ಟೋ ಜನ ಇಂದಿಗೂ ನಮ್ಮ ನಡುವೆ ಇದ್ದಾರೆ.

ದೇಶದ ಅನೇಕ ಪುಣ್ಯಕ್ಷೇತ್ರಗಳಲ್ಲಿ ಪವಿತ್ರ ಜಲಕ್ಕೆ ಪ್ರಾತಃ ಮತ್ತು ಸಂಧ್ಯಾ ಕಾಲದಲ್ಲಿ ಆರತಿ ಮಾಡುವ ಸಂಪ್ರದಾಯಗಳಿವೆ. ಕಾರ್ತಿಕ ಮಾಸದಲ್ಲಿ ಆಚರಿಸುವ ಗಂಗಾಷ್ಟಮಿಯಂತಹ ಹಬ್ಬಗಳು ಪ್ರತಿಯೊಬ್ಬರೂ ಬಳಸುವ ನೀರನ್ನು ಗಂಗಾಮಾತೆ ಎಂದು ಪೂಜಿಸಿ ಜಲಕ್ಕೆ ಕೃತಜ್ಞತಾ ಭಾವ ಸಮರ್ಪಿಸುವ ಹಬ್ಬವೇ ಆಗಿದೆ. ಅಂದರೆ ನಮ್ಮ ಸಂಸ್ಕೃತಿಯ ಕಣಕಣದಲ್ಲೂ ಜಲದ ಸಂರಕ್ಷಣೆ ಬಗ್ಗೆ ಸಾಂಕೇತಿಕವಾಗಿ ಹೇಳಲಾಗಿದೆ.

ಇಂತಹ ಶ್ರೇಷ್ಠ ಸಂಸ್ಕೃತಿಯ ವಾರಸುದಾರರಾದ ನಾವು ಜಲ ಸಂರಕ್ಷಣೆಗೆ ಎಷ್ಟು ಆದ್ಯತೆ ನೀಡುತ್ತಿದ್ದೇವೆ ಎಂದು ಅಂತರಾವಲೋಕನ ಮಾಡಿಕೊಳ್ಳಬೇಕಾಗಿದೆ. ಅವಶ್ಯಕತೆಗೆ ಮೀರಿ ಜಲವನ್ನು ಬಳಸುವುದು ಸಹ ಒಂದು ಅಪರಾಧವೆಯಾಗಿದೆ. ಕಾರ್ಖಾನೆಗಳಿಂದ ಜಲಮೂಲಗಳು ಮಲಿನವಾಗುತ್ತಿದೆ, ಕೊಳವೆ ಬಾವಿಗಳಿಂದ



ಅಂತರ್ಜಲದ ಮಟ್ಟ ಕಡಿಮೆಯಾಗುತ್ತಿದೆ ಎಂಬ ಮಾತು ಎಷ್ಟು ಸತ್ಯವೋ ಜಲ ಮಾಲಿನ್ಯಕ್ಕೆ ಪ್ರತಿ ಮನುಷ್ಯನೂ ಹೊಣೆ ಎಂಬುದು ಸಹ ಅಷ್ಟೇ ಸತ್ಯ. ದಿನ ಬೆಳಗಾದರೆ ನಾವು ಮನೆಗಳಲ್ಲಿ ಬಳಸುವ ಹಲ್ಲುಜ್ಜುವ ಪೇಸ್ಟ್, ಸಾಬುನು, ಶ್ಯಾಂಪೂ ಕಂಡೀಷನರ್ ಎಲ್ಲಾ ಮಾರ್ಜಕಗಳು, ಪಾತ್ರೆ ತೊಳೆಯಲು ಬಟ್ಟೆ ತೊಳೆಯಲು ಬಳಸುವ ಎಲ್ಲ ರಾಸಾಯನಿಕಗಳು ಅಂತಿಮವಾಗಿ ಜಲಮೂಲವನ್ನೇ ಸೇರುತ್ತವೆ, ಹಾಗಾಗಿ ಪರೋಕ್ಷವಾಗಿ ಪ್ರತಿಯೊಬ್ಬರೂ ಜಲವನ್ನು ಮಲಿನ ಮಾಡುತ್ತಿದ್ದೇವೆ. ಹಾಗಾದರೆ ಇವುಗಳ ಬಳಕೆ ಇಲ್ಲದೆ ನಾವು ಬದುಕಬೇಕೆ ಎಂಬ ಪ್ರಶ್ನೆ ಮೂಡಬಹುದು. ಆದರೆ ರಾಸಾಯನಿಕ ಯುಕ್ತ ಪದಾರ್ಥಗಳಿಗೆ ಪರ್ಯಾಯವಾಗಿ ನೈಸರ್ಗಿಕ ಉತ್ಪನ್ನಗಳನ್ನು ರಾಸಾಯನಿಕ ರಹಿತ ಉತ್ಪನ್ನಗಳ ಬಳಕೆ ಮಾಡಬೇಕು.

## ನೀರನ್ನು ಉಳಿಸಲು ನಾವೇನು ಮಾಡಬಹುದು

1. ನೀರನ್ನು ಮಿತವಾಗಿ ಬಳಸುವುದು. ಮನೆಯಲ್ಲಿ ನಲ್ಲಿ, ಪೈಪ್‌ಗಳು ಕೆಟ್ಟುಹೋಗಿ ನೀರು ಪೋಲಾಗುತ್ತಿದ್ದರೆ ತಕ್ಷಣ ದುರಸ್ತಿ ಮಾಡುವುದು. ಇಂದಿನ ದಿನಗಳಲ್ಲಿ ಒಂದೊಂದು ಹನಿಯೂ ಅತ್ಯಮೂಲ್ಯ.
2. ವಾಹನಗಳನ್ನು ತೊಳೆಯಲು ನೀರಿನ ಪೈಪನ್ನು ಬಳಸದೆ ಬಕೆಟ್ಟಿನಲ್ಲಿ ನೀರು ತೆಗೆದುಕೊಂಡು ತೊಳೆಯುವುದು. ಇದರಿಂದ ನೀರಿನ ಅತಿ ಪೋಲು ಕಡಮೆಯಾಗುತ್ತದೆ.
3. ಕಡ್ಡಾಯವಾಗಿ ಪ್ರತಿ ಕಟ್ಟಡ–ಮನೆಗಳಲ್ಲಿ ಮಳೆನೀರು ಕೊಯ್ಲು ಅಳವಡಿಸುವುದು.
4. ಕೆರೆ, ನದಿಗಳ ಮೂಲ ಮಲಿನವಾಗದಂತೆ ಎಚ್ಚರವಹಿಸುವುದು.
5. ಸಭೆ, ಸಮಾರಂಭಗಳಲ್ಲಿ ಹೆಚ್ಚು ನೀರು ಪೋಲಾಗದಂತೆ ಜಾಗ್ರತೆ ವಹಿಸುವುದು. ಕಾರ್ಯಾಗಾರಗಳನ್ನು ಹಮ್ಮಿಕೊಂಡು ನೀರಿನ ಸದ್ಬಳಕೆ ಬಗ್ಗೆ ತಿಳಿಸುವುದು.
6. ಪ್ರಕೃತಿ, ಪರಿಸರದ ರಕ್ಷಣೆಗೆ ಒತ್ತುನೀಡುವುದು.
7. ಬಟ್ಟೆ ಒಗೆದ ನಂತರ ಆ ನೀರನ್ನು ಚೆಲ್ಲದೆ ಹೂವಿನ ಗಿಡಗಳಿಗೋ, ಅಂಗಳವನ್ನು ತೊಳೆಯಲಿಕ್ಕೋ ಉಪಯೋಗಿಸಬಹುದು.
8. ಮಕ್ಕಳಿಗೆ ಬಾಲ್ಯದಲ್ಲೇ ನೀರಿನ ಸಂರಕ್ಷಣೆ ಮತ್ತು ಮಿತಬಳಕೆಯ ಬಗ್ಗೆ ಅರಿವು ಮೂಡಿಸುವುದು.
9. ವ್ಯರ್ಥವಾಗಿ ಹರಿದುಹೋಗುವ ನೀರನ್ನು ಮರುಸಂಸ್ಕರಿಸಿ ಇತರ ಉಪಯೋಗಗಳಿಗೆ ಬಳಸಿಕೊಳ್ಳುವ ಯೋಜನೆಗಳತ್ತ ಗಮನ ಹರಿಸುವುದು.
10. ನೀರಿನ ಬಳಕೆಯ ಬಗೆಗಿನ ಜಾಗೃತಿಗಾಗಿ ಸಾಮಾಜಿಕ ಜಾಲತಾಣಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು.

ದಿನನಿತ್ಯ ಜೀವನದಲ್ಲಿ ನೀರಿನಲ್ಲಿ ಲಭ್ಯತೆ ಸಾಕಷ್ಟು ಇದೆ ಎನ್ನುವ ಕಾರಣಕ್ಕೆ ಅನಗತ್ಯವಾಗಿ ನೀರಿನ ಬಳಕೆ ಮಾಡುವುದು ಎಷ್ಟು ಸರಿ? ಕೇವಲ ಒಂದು ಬಕೆಟ್‌ನಲ್ಲಿ ಸ್ನಾನ ಮಾಡಲು ಸಾಧ್ಯವಿದ್ದರೂ ಅನಗತ್ಯವಾಗಿ ನೀರು ಪೋಲು ಮಾಡುವುದು ಇತ್ತೀಚಿಗಿನ ಅಭ್ಯಾಸವಾಗಿಬಿಟ್ಟಿದೆ. ಹಲ್ಲುಜ್ಜುವಾಗ ಹರಿಯಲು ಪ್ರಾರಂಭಿಸಿದ ಎಷ್ಟೋ ಕೊಳಾಯಿಯ ನೀರು ಹಲ್ಲುಜ್ಜಿ ಮುಗಿಯುವತನಕ ಅನಾವಶ್ಯಕವಾಗಿ ಹರಿಯುತ್ತಿರುತ್ತದೆ. ಕೊಳಾಯಿಗಳು ಸೋರುತ್ತಿದ್ದರೆ ಪೋಲಾಗುತ್ತಿರುವುದು ಕೇವಲ ಒಂದು ಹನಿ ತಾನೆ ಎನ್ನುವ ತಾತ್ಸಾರ ಸಾವಿರಾರು ಲೀಟರ್ ನಷ್ಟು ನೀರನ್ನು ವ್ಯರ್ಥ ಮಾಡುತ್ತದೆ. ಅಡಿಗೆ ಮಾಡುವಾಗ ತರಕಾರಿ ತೊಳೆದ ನೀರು, ಅಕ್ಕಿ ಬೇಳೆ ತೊಳೆದ ನೀರು ಇವುಗಳನ್ನು ಸಂಗ್ರಹಿಸಿ ಕೈತೋಟದ ಗಿಡಗಳಿಗೆ ಹಾಕುವುದು ಮನೆಯ ಅಂಗಳ ತೊಳೆಯುವಾಗ ಮತ್ತು ವಾಹನಗಳನ್ನ ತೊಳೆಯುವಾಗ ಕನಿಷ್ಠ ಪ್ರಮಾಣದ ನೀರನ್ನು ಮಾತ್ರ ಬಳಸುವುದು ಇಂತಹ ಚಿಕ್ಕ ಚಿಕ್ಕ ವೈಯಕ್ತಿಕ ಬದಲಾವಣೆಗಳು ಸಹ ದೊಡ್ಡ ಪ್ರಮಾಣದಲ್ಲಿ ಪರಿಣಾಮ ಬೀರುತ್ತದೆ. ಅಂತರ್ಜಲ ಹೆಚ್ಚಿಸಲು ಇಂಗುಗುಂಡಿ ಮತ್ತು ನೀರಿನ ಉಳಿಕೆಗೆ ಮಳೆನೀರು ಕೊಯ್ಲು ಸಹ ಪ್ರತಿಯೊಬ್ಬರೂ ಮಾಡಬಹುದಾಗಿದೆ. ನೀರಿನ ಕೊಳಾಯಿಗಳಿಗೆ ಎರೇಟರ್ ಎಂಬ ಚಿಕ್ಕ ಉಪಕರಣ ಅಳವಡಿಸಿದರೆ ಪ್ರತಿ ಮನೆಯಲ್ಲೂ ದಿನ ಬಳಕೆ 50% ನೀರನ್ನು ಉಳಿಸಬಹುದಾಗಿದೆ. ಜಲ ಕ್ಷಾಮಕ್ಕೆ ಅಥವಾ ಜಲ ಮಾಲಿನ್ಯಕ್ಕೆ ನಾನೊಬ್ಬ ಮಾಡಿದರೆ ಏನು ಪ್ರಯೋಜನ ಎನ್ನುವ ಮನೋಭಾವಕ್ಕಿಂತ ಪವಿತ್ರ ಜೀವ ಜಲದ ಸಂರಕ್ಷಣೆಗೆ ನನ್ನ ಪಾತ್ರ ಏನು ಎಂಬ ಸದ್ಭಾವನೆ ಎಲ್ಲರಲ್ಲೂ ಜಾಗೃತಗೊಳ್ಳಬೇಕಾಗಿದೆ.


ಗ್ರಾಮೀಣ ಪ್ರದೇಶಗಳಲ್ಲಿ ಈಗಿನಷ್ಟು ಯಥೇಚ್ಛವಾಗಿ ಕೊಳವೆ ಬಾವಿ ಉಪಲಬ್ಧತೆ ಇಲ್ಲದ ಸಮಯದಲ್ಲಿ ಬಾವಿಯಿಂದ ನೀರನ್ನು ಸೇದಿ ತರುವ ಅಥವಾ ಕೆರೆಗಳಿಂದ ನೀರನ್ನು ಹೊತ್ತು ತರುವ ಸಂದರ್ಭಗಳಲ್ಲಿ ನೀರನ್ನು ಅತ್ಯಂತ ಜಾಗರೂಕತೆಯಿಂದ ಬಳಸುತ್ತಿದ್ದರು. ಆದರೆ ಈಗ ಅಂತರ್ಜಲ ಮಟ್ಟವನ್ನು ಕುಗ್ಗಿಸುವ ಕೊಳವೆ ಬಾವಿಗಳದ್ದೇ ಕಾರುಬಾರು, ಹಾಗಾಗಿ ನೀರಿನ ಬಳಕೆಗೆ ಕಡಿವಾಣವೇ ಇಲ್ಲದಂತಾಗಿದೆ. ಇಲ್ಲಿ ಕೂಡ ವಾಸ್ತವಿಕತೆಯ ಜಾಗೃತಿ ಅತ್ಯಂತ ಅವಶ್ಯವಾಗಿದೆ.

ಕಾಡುಗಳನ್ನು ನದಿಯ ತಾಯಿ ಎಂದು ಹೇಳಲಾಗಿದೆ ಎಂದು ಕಾಡು ನಾಶವಾಗುತ್ತಿರುವ ಕಾರಣ ಬಿದ್ದ ಮಳೆ ನೀರು ಭೂಮಿಯಲ್ಲಿ ಇಂಗದೆ ಹರಿದು ಹೋಗುತ್ತಿರುವುದು ಅಂತರ್ಜಲದ ಕುಸಿತಕ್ಕೆ ಕಾರಣವಾಗಿದೆ ಹಾಗಾಗಿ ಪ್ರತಿಯೊಬ್ಬರೂ ಕನಿಷ್ಠ 5 ಗಿಡವನ್ನು ನೆಟ್ಟು ಅವುಗಳನ್ನು ಮಕ್ಕಳಂತೆ ಅವುಗಳ ಪೋಷಣೆ ಮಾಡಿ ಪರಿಸರಕ್ಕೆ ಚಿಕ್ಕ ಕೊಡುಗೆಯನ್ನು ಕೊಡಬಹುದು. ಸಮಾನಚಿತ್ತರ ಗುಂಪು ರಚಿಸಿ ಜಲಮೂಲಗಳ ಕಲ್ಯಾಣಿಗಳ ಸ್ವಚ್ಛತೆಗೆ ಶ್ರಮದಾನ ಮಾಡುವ ಮೂಲಕ ಸಹ ಜೀವ ಜಲಕ್ಕೆ ಗೌರವ ಸಲ್ಲಿಸಬಹುದು. ನಮ್ಮ ವೇದ ಉಪನಿಷತ್ ಪುರಾಣಗಳಲ್ಲಿ ಜಲಕ್ಕೆ ಸಂಬಂಧಿಸಿ ಉಲ್ಲೇಖಿಸಿರುವ ಎಲ್ಲಾ ವಿಷಯಗಳು, ನೀರಿಗೆ ಸಂಬಂಧಿಸಿದ ನಮ್ಮ ಹಬ್ಬಗಳು ಕೇವಲ ಸಂಪ್ರದಾಯಕ್ಕೆ ಸೀಮಿತವಾಗಿರದೆ ಅದರ ತಾತ್ಪರ್ಯಯುತ ಅನುಷ್ಠಾನಕ್ಕೆ ಬಂದರೆ ಜಲದ ಪ್ರತಿ ಹನಿ ಹನಿಯೂ ಪಾವನ ತೀರ್ಥವೇ ಸರಿ.

ನದಿಯ ಹರಿವನು ತಡೆದರೆ ಬಾಯಾರಿಕೆಯು
ಹರಿವ ತೋಡು ಮುಚ್ಚಿದರೆ ಜೀವಕ್ಕಿಷ್ಟು ಕಹಿ
ಹರಿವು ಶುದ್ಧಗೊಳಿಸೋ ಸಜ್ಜನ ಕಾರ್ಯ
ಜಲಜೀವನ ಶ್ರೇಯ ಮಂಕುತಿಮ್ಮ – ಎನ್ನುವ ಡಿವಿಜಿ ಅವರ ಕಗ್ಗ ಜಲ ಸಾಕ್ಷರರಾಗಲು ಸರ್ವರನ್ನು ಪ್ರೇರೇಪಿಸಲಿ.

■

## ಸಂಸ್ಮರಣೆ — ಮಾಧವ ಸದಾಶಿವರಾವ್ ಗೋಳ್ವಲ್ಕರ್ (19 ಫೆಬ್ರವರಿ 1906 - 5 ಜೂನ್ 1973)



ಶ್ರೀ ಗುರೂಜಿ ಎಂದೂ ಕರೆಯಲ್ಪಡುವ ಶ್ರೀ ಮಾಧವರಾವ್ ಸದಾಶಿವರಾವ್ ಗೋಳ್ವಲ್ಕರ್ ಅವರು 1940 ರಿಂದ 1973 ರವರೆಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಎರಡನೇ ಸರಸಂಘಚಾಲಕರಾಗಿದ್ದರು. ಭಾರತದ ರಾಷ್ಟ್ರೀಯ ಜೀವನದಲ್ಲಿ ಆರ್‌ಎಸ್‌ಎಸ್ ಪ್ರಾಮುಖ್ಯತೆಗೆ ಏರುವಲ್ಲಿ ಶ್ರೀ ಗುರೂಜಿ ಅವರ ಪಾತ್ರ ಪ್ರಮುಖವಾದದ್ದು. ದಾರ್ಶನಿಕರಾಗಿ ಆರ್‌ಎಸ್‌ಎಸ್‌ನ ಮೂಲ ಮಾರ್ಗದರ್ಶಿ ತತ್ವಗಳನ್ನು ಸ್ಪಷ್ಟಪಡಿಸಿದರು.

ಮಾಧವರಾವ್ ತಮ್ಮ ಇಂಟರ್ಮೀಡಿಯೇಟ್ ಅಧ್ಯಯನವನ್ನು ಪೂರ್ಣಗೊಳಿಸಿದ ನಂತರ, 1924ರಲ್ಲಿ ಪ್ರತಿಷ್ಠಿತ ಬನಾರಸ್ ಹಿಂದೂ ವಿಶ್ವವಿದ್ಯಾಲಯಕ್ಕೆ ತೆರಳಿದರು. ಗ್ರಂಥಾಲಯದ ಅಮೂಲ್ಯವಾದ ಪುಸ್ತಕಗಳ ಅಪಾರ ಸಂಗ್ರಹವು ಅವರ ಜ್ಞಾನದ ದಾಹವನ್ನು ತಣಿಸಲು ಕಾಯುತ್ತಿತ್ತೇನೋ ಎಂಬಷ್ಟು ಆಳವಾಗಿ ಅವರ ಅಧ್ಯಯನವಿತ್ತು.

ಕಾಶಿಯಿಂದ ಪ್ರಾಣಿಶಾಸ್ತ್ರದಲ್ಲಿ ಗೌರವಗಳೊಂದಿಗೆ ಸ್ನಾತಕೋತ್ತರ ಪದವಿ ಪಡೆದ ನಂತರ, ಮಾಧವರಾವ್ ನಾಗ್ಪುರಕ್ಕೆ ಮರಳಿದರು. ಕೆಲವು ತಿಂಗಳುಗಳ ನಂತರ ಸಂಶೋಧನೆಗಾಗಿ ಚೆನ್ನೈಗೆ ತೆರಳಿದರು. 1929ರಲ್ಲಿ, ಮಾಧವರ ತಂದೆ ಸೈನ್ಯದಿಂದ ನಿವೃತ್ತರಾದರು. ಇದು ಅವರ ಕುಟುಂಬದಲ್ಲಿ ಆರ್ಥಿಕ ಬಿಕ್ಕಟ್ಟನ್ನು ಉಂಟುಮಾಡಿತು. ಮಾಧವರಾವ್ ಅವರ ಮುಂದಿನ ಅಧ್ಯಯನಕ್ಕೆ ಸಹಾಯ ಮಾಡಲು ಹಣವನ್ನು ಕಳುಹಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಅವರು ತಮ್ಮ ಸಂಶೋಧನೆಯನ್ನು ಅರ್ಧಕ್ಕೆ ನಿಲ್ಲಿಸಿ ನಾಗ್ಪುರಕ್ಕೆ ಮರಳಿದರು. ನಂತರ ಕಾನೂನು ಅಭ್ಯಾಸ ಆರಂಭಿಸಿದರು. ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸ ನೀಡುತ್ತಿರುವಾಗ ಆರ್‌ಎಸ್‌ಎಸ್‌ನ ಸಂಸ್ಥಾಪಕರಾದ ಡಾ.ಕೇಶವ ಬಲಿರಾಮ ಹೆಡಗೇವಾರ್ ಅವರ ನಿಕಟವರ್ತಿ ಭಯ್ಯಾಜಿ ದಾನಿಯವರ ಪ್ರೇರಣೆಯಿಂದ ವಾರಣಾಸಿಯಲ್ಲಿ ಆರ್‌ಎಸ್‌ಎಸ್ ಶಾಖೆಯನ್ನು ಆರಂಭಿಸಿದರು.

ಗೋಳ್ವಲ್ಕರ್ ಅವರು ಸಂಘದ ಬೈಠಕ್‌ಗಳಿಗೆ ಹಾಜರಾಗುತ್ತಿದ್ದರಾದರೂ ಸಂಘಟನೆಯಲ್ಲಿ ತೀವ್ರ ಆಸಕ್ತಿಯನ್ನು ವಹಿಸಿರಲಿಲ್ಲ. 1931ರಲ್ಲಿ, ಹೆಡಗೇವಾರ್ ಅವರು ಬನಾರಸ್‌ಗೆ ಭೇಟಿ ನೀಡಿದರು. ಗೋಳ್ವಲ್ಕರ್ ಹೆಡಗೇವಾರ್ ವ್ಯಕ್ತಿತ್ವದಿಂದ ಆಕರ್ಷಿತರಾದರು. 1934ರಲ್ಲಿ, ಹೆಡಗೇವಾರ್ ಅವರು ಇವರನ್ನು ನಾಗ್ಪುರ ಶಾಖೆಯ ಕಾರ್ಯವಾಹರನ್ನಾಗಿ ಮಾಡಿದರು. ಅಕ್ಟೋಬರ್ 1936ರಲ್ಲಿ, ಗೋಳ್ವಲ್ಕರ್ ಅವರು ತಮ್ಮ ಕಾನೂನು ಅಭ್ಯಾಸ ಮತ್ತು ಸಂಘಕಾರ್ಯವನ್ನು ತ್ಯಜಿಸಿ, ಆಧ್ಯತ್ಮದ ಸೆಳೆತದಿಂದ ಸನ್ಯಾಸಿಯಾಗಲು ಪಶ್ಚಿಮ ಬಂಗಾಳದ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಅವರು ರಾಮಕೃಷ್ಣರ ಶಿಷ್ಯರೂ, ಸ್ವಾಮಿ ವಿವೇಕಾನಂದರ ಸಹೋದರ ಸನ್ಯಾಸಿಯೂ ಆಗಿದ್ದ ಸ್ವಾಮಿ ಅಖಂಡಾನಂದರ ಶಿಷ್ಯರಾದರು.

13 ಜನವರಿ 1937 ರಂದು, ಗೋಳ್ವಲ್ಕರ್ ಅವರು ಸನ್ಯಾಸಿ ದೀಕ್ಷೆಯನ್ನು ಸ್ವೀಕರಿಸಿದರು. ಸ್ವಾಮಿ ಅಖಂಡಾನಂದರ ಕಾಲವಾದ ನಂತರ ಆಶ್ರಮವನ್ನು ತೊರೆದರು. ಆರ್‌ಎಸ್‌ಎಸ್ ಸಂಘಟನೆಯ ಮೂಲಕ ಹಿಂದೂ ಸಮಾಜದ ರಾಷ್ಟ್ರದ ಸೇವೆ ಮಾಡಬೇಕೆಂದು ನಿಶ್ಚಯಿಸಿದರು. ಗೋಳ್ವಲ್ಕರ್ ಸಂಘ ಮರುಸೇರ್ಪಡೆಯಾದ ನಂತರ, ಹೆಡಗೇವಾರ್ ಅವರನ್ನು ನಾಯಕತ್ವಕ್ಕಾಗಿ ಸಿದ್ಧಪಡಿಸಲು ಪ್ರಾರಂಭಿಸಿದರು. ಅವರನ್ನು 1937 ರಿಂದ 1939 ರವರೆಗೆ ಸಂಘ ಶಿಕ್ಷಾ ವರ್ಗದ ಜವಾಬ್ದಾರಿ ನೀಡಿದರು. 1939ರಲ್ಲಿ ಹೆಡಗೇವಾರ್ ಅವರು ಗೋಳ್ವಾಲ್ಕರ್ ಅವರು ಮುಂದಿನ ಸರಕಾರ್ಯವಾಹ ಎಂದು ಘೋಷಿಸಿದರು. 21 ಜೂನ್ 1940 ರಂದು ಹೆಡಗೇವಾರ್ ತಮ್ಮ ಸಾವಿನ ಹಿಂದಿನ ದಿನ ಗೋಳ್ವಲ್ಕರ್ ಆರ್‌ಎಸ್‌ಎಸ್ ನಾಯಕರಾಗಬೇಕೆಂದು ಒಂದು ಕಾಗದದ ಹಾಳೆಯಲ್ಲಿ ಬರೆದಿದ್ದರು.

30 ವರ್ಷಗಳಿಗೂ ಹೆಚ್ಚು ಕಾಲ ಆರ್‌ಎಸ್‌ಎಸ್‌ನ ನಾಯಕರಾಗಿ, ಗೋಳ್ವಾಲ್ಕರ್ ಸಂಘವನ್ನು ಭಾರತದಲ್ಲಿನ ಪ್ರಬಲ ಸಂಘಟನೆಗಳಲ್ಲಿ ಒಂದನ್ನಾಗಿ ಮಾಡಿದರು. ಇದು ತನ್ನ 30ಕ್ಕೂ ಹೆಚ್ಚು ಸಂಘಟನೆಗಳ ಮೂಲಕ ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಕಾರ್ಮಿಕ ಕ್ಷೇತ್ರಗಳಿಗೆ ಕವಲೊಡೆಯಿತು. ಆರ್‌ಎಸ್‌ಎಸ್ ವಿದೇಶಗಳಿಗೆ ವಿಸ್ತರಿಸಿತು, ಅಲ್ಲಿನ ಹಿಂದೂಗಳನ್ನು ಭಾರತೀಯ ಸ್ವಯಂಸೇವಕ ಸಂಘ ಅಥವಾ ಹಿಂದೂ ಸ್ವಯಂಸೇವಕ ಸಂಘದಂತಹ ಸಂಸ್ಥೆಗಳಿಗೆ ಸೇರಿಸಿಕೊಳ್ಳಲಾಯಿತು. ಆರ್‌ಎಸ್‌ಎಸ್ ವಿಶ್ವ ದೃಷ್ಟಿಕೋನದಲ್ಲಿ ಸೂಕ್ಷ್ಮವಾದ ಮತ್ತು ಮಹತ್ವದ ಬದಲಾವಣೆ ಕಂಡುಬಂದಿದೆ.

## ಪೂರ್ಣಗೊಳ್ಳದ ಒಂದು ಪಯಣ–ಚರಖಿ ದಾದರೀ, ಹರಿಯಾಣ

12 ನವೆಂಬರ್ 1996ರ ಸಂಜೆ ಹರಿಯಾಣದ ಚರಖೀ ದಾದರೀ ಜಿಲ್ಲೆಯು ಒಂದು ಭೀಕರ ಅಪಘಾತಕ್ಕೆ ಸಾಕ್ಷಿಯಾಯಿತು. ಹೃದಯವನ್ನು ನಡುಗಿಸುವ ಆ ಶಬ್ದ ಭಯಾನಕವಾದ ಮಿಂಚಿನ ಆರ್ಭಟ ಹಾಗೂ ಭಯಂಕರವಾದ ಬೆಂಕಿಯ ಉಂಡೆಗಳ ತೀವ್ರತೆಯು ನೋಡು ನೋಡುತ್ತಿದಂತೆ ಹಳ್ಳಿಯ ಹೊಲ ಗದ್ದೆಗಳ ಮೇಲೆ ಬೀಳಲಾರಂಬಿಸಿದವು.

ಈ ಬೆಂಕಿಯ ಉಂಡೆಗಳು ಯಾವುದೊ ಉಲ್ಕೆಗಳಾಗಿರಲಿಲ್ಲ, ಬದಲಾಗಿ, ದೆಹಲಿಯಿಂದ ಅರಬ್‌ನತ್ತ ಪಯಣಿಸುತ್ತಿದ್ದ ಒಂದು ಯಾತ್ರಿಕರ ವಿಮಾನ ಹಾಗೂ ದೆಹಲಿಯತ್ತ ಬರುತ್ತಿದ್ದ ಕಝುಕಿಸ್ತಾನ್‌ನ ಸರಕು ವಿಮಾನಗಳ ಅವಶೇಷಗಳಾಗಿತ್ತು. ಈ 2 ವಿಮಾನಗಳ ಘರ್ಷಣೆಯಾದ ನಂತರ ಭೂಮಿಯ ಮೇಲೆ ಬಿದ್ದ ಇದರ ಮೊನಚಾದ ಭಾಗವು 16 ಅಡಿ ಕೆಳಗೆ ಹೂತುಹೋಯಿತು.

ಒಂದೆ ಕ್ಷಣದಲ್ಲಿ ಸೌದಿ ವಿಮಾನದಲ್ಲಿದ್ದ 312 ಜನ ಹಾಗೂ ಕಝುಕಿಸ್ಥಾನ ವಿಮಾನದ 37 ಜನ ಮೃತ್ಯುವಶವಾಗಿದ್ದರು. ಚರಖಿ ದಾದರೀಯ ಸುತ್ತಮುತ್ತ ನಾಲ್ಕು–ಐದು ಕಿಲೋಮೀಟರ್ ದೂರದ ಢಾಣಿ ಫೌಗಾಟ್, ಖೇಡಿ ಸೋನಾವಾಲ್ ಮತ್ತು ಮಾಲಿಯಾವಾಸ್ ಗ್ರಾಮಗಳ ಗದ್ದೆಗಳಲ್ಲಿ ಸುಟ್ಟು ಕರಕಲಾಗಿ 351 ಶವಗಳು ಬಿದ್ದಿದ್ದವು. ಅಪಘಾತದ ಸುದ್ದಿ ತಿಳಿದ ತಕ್ಷಣ ಸರ್ಕಾರಿ ಸಿಬ್ಬಂದಿಗಳು ಬರುವ ಮೊದಲು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು ಸ್ಥಳಕ್ಕೆ ಆಗಮಿಸಿದ್ದರು.

ಛಿದ್ರ ಛಿದ್ರವಾಗಿ ಚದುರಿಹೋಗಿದ್ದ ಶವಗಳ ನಡುವೆ ಬದುಕುಳಿದವರಿಗಾಗಿ ಹುಡುಕಾಡುತ್ತಿದ್ದ ಭಿವಾನಿ ಜಿಲ್ಲೆಯ ಅಂದಿನ ಸಂಘಚಾಲಕರಾದ ಶ್ರೀ ಜೀತರಾಮ ಅವರು ಸ್ವಯಂಸೇವಕರೊಂದಿಗೆ ಅಲ್ಲಿಗೆ ಬಂದು ನೋಡಿದಾಗ ಭಯಗೊಂಡರು. ಒಂದು ಕ್ಷಣವನ್ನೂ ವ್ಯರ್ಥಮಾಡದೆ ಒಂದು ಗಂಟೆಯೊಳಗೆ ಅಗತ್ಯ ವಸ್ತುಗಳ ವ್ಯವಸ್ಥೆ ಮಾಡಲಾಯಿತು. ದೀಪಗಳ ಬೆಳಕಿನ ಸಹಾಯದಿಂದ ಸ್ವಯಂಸೇವಕರು ಬದುಕುಳಿದವರಿಗಾಗಿ ಹುಡುಕಾಡಲು ಪ್ರಾರಂಭಿಸಿದರು. ಆದರೆ ಕೇವಲ ಇಬ್ಬರೇ ಇಬ್ಬರು ಪ್ರಾಣ ಉಳಿಸಿಕೊಳ್ಳಲು ಹೋರಾಡುತ್ತಿದ್ದರು. ಆದರೆ ಜೀವನ್ಮರಣದ ಹೋರಾಟದಲ್ಲಿದ್ದ ಅವರನ್ನು ಸ್ಥಳದಲ್ಲಿ ಉಪಸ್ಥಿತರಿದ್ದ ಹೆಡಗೇವಾರ್ ಚಿಕಿತ್ಸಾಲಯದ ತಂಡದವರಿಂದ ಉಳಿಸಿಕೊಳ್ಳಲಾಗಲಿಲ್ಲ.

24 ವರ್ಷಗಳ ಹಿಂದೆ ನೋಡಿದ ಆ ಭಯಾನಕ ದೃಶ್ಯದ ವಿಷಯ ಬಂದ ತಕ್ಷಣ ಅಂದಿನ ಸಂಘಚಾಲಕರಾದ ಶ್ರೀ ಜಿತರಾಮ ಅವರು ಇಂದಿಗೂ ಭಾವುಕರಾಗುತ್ತಾರೆ. ಅಲ್ಲಿನ ಸ್ಥಳೀಯ ರೈತರಾದ ಶ್ರೀ ಚಂದ್ರಭಾನ್ ಅವರ ಟ್ರ್ಯಾಕ್ಟರ್‌ನಲ್ಲಿ ತೀವ್ರವಾಗಿ ಸುಟ್ಟುಹೋಗಿದ್ದ ಶವಗಳನ್ನು ಸ್ವಯಂಸೇವಕರು ಸಾಗಿಸಿದರು. ಶವಗಳು ಕೊಳೆಯದಂತೆ ಕಾಪಾಡಲು ರಾತ್ರಿಯ 11ಗಂಟೆಯ ವೇಳೆಯಲ್ಲಿ ಐಸ್ ಗೆಡ್ಡೆಯ ಕಾರ್ಖಾನೆಯ ಬಾಗಿಲನ್ನು ತೆರೆಸಲಾಯಿತು ಎಂಬುದನ್ನು ಅವರು ನೆನಪಿಸುತ್ತಾರೆ.

ಭಿವಾನಿ, ಝಜ್ಜರ್ ಹಾಗೂ ರೇವಾಡಿಯಂತಹ ಸುತ್ತಮುತ್ತಲಿನ ಪ್ರದೇಶಗಳಿಂದ ಐಸ್ ಸ್ಲಾಬ್‌ಗಳನ್ನು ತರಿಸಿಕೊಳ್ಳಲಾಯಿತು. ಸಮಯಕ್ಕೆ ಸರಿಯಾಗಿ ಉಪಸ್ಥಿತರಿದ್ದ ಎಸ್.ಪಿ.ಯವರ ಸಹಾಯದಿಂದ ಶವಸಂಸ್ಕಾರಕ್ಕೆ ಬೇಕಾಗುವ ಅವಶ್ಯ ವಸ್ತುಗಳ ಪಟ್ಟಿಯನ್ನು ಮಾಡಲಾಯಿತು. ಹಳ್ಳಿಯ ಜನರ ಸಹಾಯದಿಂದ ಶವಸಂಸ್ಕಾರಕ್ಕಾಗಿ ಶವಪೆಟ್ಟಿಗೆಯ ವ್ಯವಸ್ಥೆಯನ್ನು ಮಾಡಲಾಯಿತು. ಸಾವನ್ನಪ್ಪಿದ ಪ್ರಯಾಣಿಕರಲ್ಲಿ ಹೆಚ್ಚಿನವರು ಮುಸಲ್ಮಾನರು ಅಥವಾ ಕ್ರಿಶ್ಚಿಯನ್ನರಾಗಿದ್ದರು. ಹಾಗಾಗಿ ಭಿವಾನಿ ಜಿಲ್ಲೆಯ ಸ್ವಯಂಸೇವಕರಾದ ಸಂತರಾಮ್ ಅವರ ಫ್ಯಾಕ್ಟರಿಯಲ್ಲಿ ಶವದ ಪೆಟ್ಟಿಗೆಯನ್ನು ತಯಾರಿಸಲಾಯಿತು.

ಬೆಳಿಗ್ಗೆ 5 ಗಂಟೆಯೊಳಗೆ 159 ಶವಗಳನ್ನು ಭಿವಾನಿಯ ಸಿವಿಲ್ ಆಸ್ಪತ್ರೆಗೆ ಸಾಗಿಸಲಾಗಿತ್ತು. ಅಷ್ಟರೊಳಗೆ ಶ್ರೀ ಜೀತಾರಾಮ ಅವರ ನೇತೃತ್ವದಲ್ಲಿ ಸ್ವಯಂಸೇವಕರು ಸಂತ್ರಸ್ತರ ಸಹಾಯ ಸಮಿತಿಯನ್ನು ರಚಿಸಿದ್ದರು. ಇದರಲ್ಲಿ ವಿಶ್ವ ಹಿಂದೂ ಪರಿಷತ್, ಆರ್ಯ ಸಮಾಜ, ವಿದ್ಯಾರ್ಥಿ ಪರಿಷತ್ ಹಾಗೂ ಗುರುದ್ವಾರ ಸಮಿತಿಗಳು ಸೇರಿದಂತೆ ಅನೇಕ ಸಾಮಾಜಿಕ ಸಂಸ್ಥೆಗಳ ಸದಸ್ಯರನ್ನು ಸೇರಿಸಿಕೊಂಡು ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಿದರು.

ಬೆಳಗಾಗುತ್ತಿದ್ದಂತೆ ಈ ಸುದ್ದಿ ಕಾಡ್ಗಿಚ್ಚಿನಂತೆ ಎಲ್ಲೆಡೆ ಹರಡಿದ್ದರಿಂದ ಮೃತರ ಸಂಬಂಧಿಕರು, ಮಾಧ್ಯಮದವರು, ಪೊಲೀಸ್ ಅಧಿಕಾರಿಗಳು ಘಟನಾ ಸ್ಥಳಕ್ಕೆ ಬಂದಿದ್ದರು. ಸಮಿತಿಯು ಇವರೆಲ್ಲರಿಗೂ ಪಾನೀಯ ಹಾಗೂ ಭೋಜನ ಇತ್ಯಾದಿಗಳ ವ್ಯವಸ್ಥೆಯನ್ನು ಮಾಡಿತು. ಯಾವ ಯಾತ್ರಿಗಳ ಸಂಬಂಧಿಕರು ಘಟನೆಯ ಸ್ಥಳಕ್ಕೆ ಬರಲಾಗಲಿಲ್ಲವೋ ಅಂಥಹ ಮೃತದೇಹಗಳನ್ನು ಹೂಳುವ ವ್ಯವಸ್ಥೆಯನ್ನು ಸ್ವಯಂಸೇವಕರೇ ಮಾಡಿದರು. ಇದಕ್ಕೆ ಸ್ಥಳೀಯ ಮೌಲ್ವಿ ಹಾಗೂ ದೆಹಲಿಯಿಂದ ಬಂದಿದ್ದ ಇಸ್ಲಾಮಿಯ ಪ್ರತಿನಿಧಿ ಮಂಡಳಿಯ ಸಹಾಯವನ್ನು ತೆಗೆದುಕೊಳ್ಳಲಾಯಿತು.

ಸಮಿತಿಯ ಕಾರ್ಯಕರ್ತರು ಮೂರು ದಿನಗಳ ಕಾಲ ಕಾರ್ಯ ನಿರ್ವಹಿಸಿದರು. ಸ್ಥಳದಲ್ಲಿ ಉಪಸ್ಥಿತರಿದ್ದ ಅಂದಿನ ಕ್ಷೇತ್ರ ಪ್ರಚಾರಕರಾದ ಪ್ರೇಮ್ ಗೋಯಲ್ ಅವರ ಪ್ರಕಾರ, ಮೊದಲ ಬಾರಿಗೆ ಮಸೀದಿಯಲ್ಲಿ ಸ್ವಯಂಸೇವಕರನ್ನು ಚರಖಿ ದಾದರಿಯ ಸ್ಥಳೀಯ ಮುಸ್ಲಿಂ ಸಮಾಜವು ಗೌರವಿಸಿತ್ತು.

ಈ ಸಂದರ್ಭದಲ್ಲಿ ಅಲ್ಲಿಯ ಮೌಲ್ವಿಯಾದ ಮೊಹಮ್ಮದ್ ಹಮೀದ್ "ಸಂಘದ ಸ್ವಯಂಸೇವಕರು ಕೇವಲ ಮಾನವೀಯತೆಯಿಂದ ಕೆಲಸ ಮಾಡುತ್ತಾರೆ" ಎಂದು ಹೇಳಿದರು. ಅಲ್ಲದೆ, ದುರ್ಘಟನೆಯ ವಿಷಯ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ಬಂದ ಅಂದಿನ ಕೇಂದ್ರೀಯ ನಾಗರಿಕ ವಿಮಾನಯಾನ ಸಚಿವ ಶ್ರೀ ಇಬ್ರಾಹಿಂ ಅವರು "ಇವರು ಎಲ್ಲ ಜಾತಿ ಧರ್ಮವನ್ನು ಮೀರಿ ನಿಂತ ಮಾನವತೆಯ ಪೂಜಾರಿಗಳು" ಎಂದು ಸ್ವಯಂಸೇವಕರನ್ನು ಶ್ಲಾಘಿಸಿದರು.

## ಪುಸ್ತಕ ಪರಿಚಯ

### ರಾಷ್ಟ್ರಧರ್ಮ

**ಲೇಖಕರು:** ಡಾ. ಅಜಕ್ಕಳ ಗಿರೀಶ್ ಭಟ್
**ಪ್ರಕಾಶಕರು:** ಅಯೋಧ್ಯಾ ಬುಕ್ಸ್
**ಬೆಲೆ:** ರೂ.120





ಹಿಂದೆ ಸನಾತನ ಧರ್ಮದ ಬಗ್ಗೆ ಜನರಲ್ಲಿ ಒಂದು ಬಗೆಯ ಸ್ಪಷ್ಟತೆ ಇತ್ತು ಹಾಗೂ ರಿಲಿಜನ್‌ಗಳ ವಿಷಯದಲ್ಲಿ ಅಸ್ಪಷ್ಟತೆ ಇತ್ತು. ಆದರೆ ಇಂದು ರಿಲಿಜನ್ ವಿಷಯದಲ್ಲಿ ಹೆಚ್ಚು ಸ್ಪಷ್ಟತೆ ಪಡೆಯಲು ಸಾಧ್ಯವಾಗಿದೆ, ಆದರೆ ಸನಾತನ ಅಥವಾ ಹಿಂದು ಧರ್ಮದ ಬಗ್ಗೆಯೇ ಹಲವು ಗೊಂದಲಗಳು, ಸಂದಿಗ್ಧಗಳು ನಿರ್ಮಾಣವಾಗಿವೆ. ರಾಜಕಾರಣಿಗಳ ಹೇಳಿಕೆಗಳು, ಬುದ್ಧಿಜೀವಿಗಳ ಬರವಣಿಗೆಗಳು ಹಾಗೂ ನ್ಯಾಯಾಂಗವು ಕಾಲಕಾಲಕ್ಕೆ ಕೊಟ್ಟ ತೀರ್ಪುಗಳು – ಹೀಗೆ ಹಲವು ಸಂಗತಿಗಳು ಒಂದರೊಳಗೊಂದು ಸೇರಿಕೊಂಡು ಇಂದು ಸನಾತನ ಧರ್ಮದ ರೂಪರೇಖೆಗಳನ್ನು ಅರಿಯುವುದೇ ದುಸ್ತರ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಇಂಥ ಸಂದರ್ಭದಲ್ಲಿ ಹಿಂದು ಧರ್ಮದ ವ್ಯಾಖ್ಯೆ ಮತ್ತು ವ್ಯಾಖ್ಯಾನವನ್ನು ಹೇಗೆ ಮಾಡಬಹುದು; ಅದರ ಗುಣಲಕ್ಷಣಗಳೇನು; ಯಾವುದು ಸನಾತನ ಧರ್ಮದ ಪರಿಧಿಗೆ ಬರುತ್ತದೆ ಯಾವುದು ಅಲ್ಲ – ಇಂಥ ಹತ್ತು ಹಲವು ಸಂಗತಿಗಳ ಬಗ್ಗೆ ಸ್ಪಷ್ಟತೆ ಕೊಡುವ ಕೆಲಸವನ್ನು ಡಾ. ಅಜಕ್ಕಳ ಗಿರೀಶ್ ಭಟ್ ಅವರ ಕೃತಿ 'ರಾಷ್ಟ್ರಧರ್ಮ' ಮಾಡುತ್ತದೆ. ಇದು ಸನಾತನ ಧರ್ಮದ ಬಗ್ಗೆ ತಿಳಿಯಬಯಸುವವರು, ಅರೆಬರೆ ತಿಳಿದುಕೊಂಡವರು ಮತ್ತು ಎಲ್ಲವನ್ನೂ ತಿಳಿದಿದ್ದೇವೆ ಎಂದು ಭಾವಿಸಿದವರು – ಹೀಗೆ ಸಮಸ್ತರೂ ಓದಿ ಮನನ ಮಾಡಿಕೊಳ್ಳಬೇಕಾದ ಕೃತಿ. ಪುಸ್ತಕಕ್ಕಾಗಿ ಸಂಪರ್ಕಿಸಿ: 9620916996

## ನಾಗರಿಕ ಶಿಷ್ಟಾಚಾರ

### ಸೀಟ್ ಬೆಲ್ಟ್ ಧರಿಸಿ

ಭಾರತೀಯ ಕಾನೂನಿನ ಪ್ರಕಾರ, ಎಲ್ಲಾ ಕಾರ್ ಪ್ರಯಾಣಿಕರಿಗೆ ಸೀಟ್ ಬೆಲ್ಟ್‌ಗಳು ಮತ್ತು ಮುಂಭಾಗದ ಸೀಟ್ ಪ್ರಯಾಣಿಕರಿಗೆ ಡ್ಯುಯಲ್ ಏರ್‌ಬ್ಯಾಗ್‌ಗಳು ಇರಬೇಕು. ಜೊತೆಗೆ, ಐಷಾರಾಮಿ ಕಾರುಗಳು ಹಿಂಭಾಗದಲ್ಲಿ ಏರ್ ಬ್ಯಾಗ್‌ಗಳನ್ನು ಹೊಂದಿರಬೇಕು ಎಂಬ ನಿಯಮವಿದೆ. ಆದರೆ ವಾಹನಗಳಲ್ಲಿ ಈ ಎಲ್ಲಾ ವ್ಯವಸ್ಥೆಗಳಿದ್ದರೂ ಸಣ್ಣಪುಟ್ಟ ಕಾರು ಅಪಘಾತಗಳಲ್ಲಿಯೂ ಪ್ರಾಣ ಕಳೆದುಕೊಂಡವರ ಸಂಖ್ಯೆ ಹೆಚ್ಚಾಗುತ್ತಿದೆ. ಅದಕ್ಕೆ ಕಾರಣ ಸೀಟ್ ಬೆಲ್ಟ್ ಧರಿಸದೇ ಇರುವುದು. 2020ರ ರಸ್ತೆ ಮತ್ತು ಹೆದ್ದಾರಿ ಸಚಿವಾಲಯದ ರಸ್ತೆ ಅಪಘಾತಗಳ ವರದಿಯನ್ನು ನಾವು ನೋಡಿದರೆ, ಸೀಟ್ ಬೆಲ್ಟ್ ಬಳಸದ ಕಾರಣ 15,100 ಚಾಲಕರು ಮತ್ತು ಪ್ರಯಾಣಿಕರು ಸಾವನ್ನಪ್ಪಿದ್ದಾರೆ ಎಂದು ಅದು ಬಹಿರಂಗಪಡಿಸಿದೆ. ಕೇಂದ್ರ ಮೋಟಾರು ವಾಹನ ನಿಯಮಗಳ (CMVR) ಪ್ರಕಾರ ಹಿಂಬದಿ ಸೀಟಿನಲ್ಲಿ ಕುಳಿತುಕೊಳ್ಳುವ ಪ್ರಯಾಣಿಕರು ಸೀಟ್ ಬೆಲ್ಟ್ ಧರಿಸುವುದು ಕಡ್ಡಾಯವಾಗಿದೆ. 2004ರಲ್ಲಿ ಸೂಚಿಸಲಾಗಿದೆ. CMVRನ ನಿಯಮ 138(3) ಚಾಲನೆಯಲ್ಲಿರುವ ವಾಹನದಲ್ಲಿ ಮುಂಭಾಗದ ಸೀಟಿನಲ್ಲಿ ಅಥವಾ ಮುಂಭಾಗದ ಹಿಂಭಾಗದಲ್ಲಿ ಕುಳಿತುಕೊಳ್ಳುವ ಪ್ರಯಾಣಿಕರಿಗೆ ಸೀಟ್ ಬೆಲ್ಟ್‌ಗಳನ್ನು ಧರಿಸುವುದನ್ನು ಕಡ್ಡಾಯಗೊಳಿಸುತ್ತದೆ. ಸೀಟ್ ಬೆಲ್ಟ್ ನಿಯಮ ಉಲ್ಲಂಘಿಸುವವರಿಗೆ ₹ 1,000 ದಂಡವೂ ಇದೆ.



ಸಂಪಾದಕೀಯ ಸಹಕಾರ: ಸಹನಾ ಹೆಗಡೆ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಗಿರಿಧರ ಉದ್ಯಾವರ, ಸುಲಕ್ಷಣ ಶರ್ಮಾ

# ಸಾಲುದ್ದದ ಸುದ್ದಿಗಳು

## ಸೂರ್ಯ ಘರ್ ಯೋಜನೆ: 8.5 ಲಕ್ಷ ಮನೆಗಳು ಪಡೆದಿವೆ ಮೇಲ್ಛಾವಣಿ ಸೌರಶಕ್ತಿ ಸಂಪರ್ಕ

75,000 ಕೋಟಿ ರೂ.ಗಳ ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆ ಪ್ರಾರಂಭವಾದ ಸುಮಾರು ಒಂದು ವರ್ಷದ ಒಳಗಡೆ 8.5 ಲಕ್ಷ ಮನೆಗಳು ಮೇಲ್ಛಾವಣಿಯ ಸೌರಶಕ್ತಿ ಸಂಪರ್ಕಗಳನ್ನು ಯಶಸ್ವಿಯಾಗಿ ಸ್ಥಾಪಿಸಿವೆ. ಒಂದು ಕೋಟಿ ಸೌರಶಕ್ತಿ ಚಾಲಿತ ಮನೆಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿರುವ ಈ ಉಪಕ್ರಮವನ್ನು ಮೊದಲು ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆಯ ನಂತರ ಪರಿಚಯಿಸಲಾಯಿತು. ಸೂರ್ಯ ಘರ್ ಪೋರ್ಟಲ್‌ನಲ್ಲಿ 20 ಲಕ್ಷ ಅರ್ಜಿಗಳಲ್ಲಿ ಕೇವಲ 5 ಲಕ್ಷ ಸ್ಥಾಪನೆಗಳು ಪೂರ್ಣಗೊಂಡಿವೆ ಎಂದು ಎತ್ತಿ ತೋರಿಸಿತು. ಹವಾಮಾನ ಸಂಬಂಧಿತ ಅಡಚಣೆಗಳು ವಿಳಂಬಕ್ಕೆ ಕಾರಣವೆಂದು ಅಧಿಕಾರಿಗಳು ಹೇಳಿದ್ದಾರೆ, ಆದರೆ 2024–25ರ ಹಣಕಾಸು ವರ್ಷದಲ್ಲಿ (FY) 12 ಲಕ್ಷ ಸ್ಥಾಪನೆಗಳನ್ನು ಸಾಧಿಸುವ ವಿಶ್ವಾಸವನ್ನು ಸರ್ಕಾರ ಹೊಂದಿದೆ.

## ಯುದ್ಧಭೂಮಿ ಕಣ್ಗಾವಲು ವ್ಯವಸ್ಥೆ 'ಸಂಜಯ್' ಅನಾವರಣ



ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಇಂದು ನವದೆಹಲಿಯಲ್ಲಿ ಯುದ್ಧಭೂಮಿ ಕಣ್ಗಾವಲು ವ್ಯವಸ್ಥೆ ಸಂಜಯ್ ಅನ್ನು ಅನಾವರಣಗೊಳಿಸಿದರು. ಒಂದು ಸ್ವಯಂಚಾಲಿತ ವ್ಯವಸ್ಥೆಯಾಗಿರುವ ಖಂಓಎಂಜ ನೆಲ ಮತ್ತು ವೈಮಾನಿಕ ಯುದ್ಧಭೂಮಿ ಸಂವೇದಕಗಳಿಂದ ಒಳಹರಿವುಗಳನ್ನು ಸಂಯೋಜಿಸುತ್ತದೆ ಮತ್ತು ಯುದ್ಧಭೂಮಿಯ ಸಾಮಾನ್ಯ ಕಣ್ಗಾವಲು ಚಿತ್ರವನ್ನು ಸೆರೆಹಿಡಿಯುತ್ತದೆ. ಇದು ವಿಶಾಲವಾದ ಭೂಗಡಿಗಳನ್ನು ಮೇಲ್ವಿಚಾರಣೆ ಮಾಡಲು, ಒಳನುಗ್ಗುವಿಕೆಯನ್ನು ತಡೆಯಲು ಮತ್ತು ಸಾಟಿಯಿಲ್ಲದಂತೆ ನಿಖರತೆಯೊಂದಿಗೆ ಸಂದರ್ಭಗಳನ್ನು ನಿರ್ಣಯಿಸಲು ಸಹಾಯ ಮಾಡುತ್ತದೆ.

## ಬಲಾಢ್ಯ ದೇಶಗಳಲ್ಲಿ ಭಾರತಕ್ಕೆ 12ನೇ ಸ್ಥಾನ

ಫೋರ್ಬ್ಸ್ 2025ರ ಬಲಾಢ್ಯ ರಾಷ್ಟ್ರಗಳ ಪಟ್ಟಿ ಬಿಡುಗಡೆ ಮಾಡಿದ್ದು, ಅಮೆರಿಕ ಮೊದಲ ಸ್ಥಾನ ಪಡೆದಿದ್ದರೆ, ಚೀನಾ ಎರಡನೇ ಸ್ಥಾನದಲ್ಲಿದೆ, ಭಾರತ 12ನೇ ಸ್ಥಾನ ಪಡೆದಿದೆ. ನಾಯಕತ್ವ, ಆರ್ಥಿಕ ಪ್ರಭಾವ, ರಾಜಕೀಯ ಶಕ್ತಿ, ಬಲವಾದ ಅಂತಾರಾಷ್ಟ್ರೀಯ ಮೈತ್ರಿ ಮತ್ತು ಮಿಲಿಟರಿ ಬಲವನ್ನು ಆಧರಿಸಿ ವಿವಿಧ ಮಾನದಂಡಗಳನ್ನು ಪರಿಗಣಿಸಿ ಶ್ರೇಯಾಂಕ ನೀಡಲಾಗಿದೆ. ಬಿಎವಿ ಗ್ರೂಪ್, ಪೆನ್ಸಿಲ್ವೇನಿಯಾ ವಿವಿಯ ವಾರ್ಟನ್ ಶಾಲೆಯ ಪ್ರೊಫೆಸರ್ ಡೇವಿಡ್ ರೀಬೆಸ್ಟೈನ್ ನೇತೃತ್ವದ ಸಂಶೋಧಕರ ಸಹಯೋಗದೊಂದಿಗೆ ಪವರ್‌ಫುಲ್ ರಾಷ್ಟ್ರಗಳ ಪಟ್ಟಿ ಸಿದ್ಧಪಡಿಸಲಾಗಿದೆ.

## 65% ಭಾರತೀಯರಿಗೆ ಸಾಮಾಜಿಕ ಭದ್ರತಾ ಯೋಜನೆಯ ಅನುಕೂಲ

ಕಳೆದ ಹತ್ತು ವರ್ಷಗಳಲ್ಲಿ ಭಾರತದ ಸಾಮಾಜಿಕ ಭದ್ರತಾ ವೆಚ್ಚವು ಶೇ.24.4ರಿಂದ ಶೇ.48.8ಕ್ಕೆ ಏರಿಕೆಯಾಗಿದೆ. ಸುಮಾರು 60 ಕೋಟಿ ಭಾರತೀಯರು ಆರೋಗ್ಯ ಭದ್ರತೆ ಹೊಂದಿದ್ದಾರೆ. ದೇಶದ ಶೇ.65ರಷ್ಟು ಜನಸಂಖ್ಯೆ ಒಂದಿಲ್ಲೊಂದು ಸಾಮಾಜಿಕ ಭದ್ರತಾ ಯೋಜನೆಯ ಫಲಾನುಭವಿ ಯಾಗಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ಸಚಿವ ಡಾ. ಮನ್ಸುಖ್ ಮಂಡಾವೀಯ ಹೇಳಿದರು.

## ISRO 100ನೇ ರಾಕೆಟ್ ಉಡಾವಣೆ ಯಶಸ್ವಿ

1963ರ ನ.21ರಂದು ಅಮೆರಿಕಾದ ರಾಕೆಟ್ ಬಳಸಿ ಮೊದಲ ಬಾರಿಗೆ ಉಪಗ್ರಹ ಮಾಡಿದ್ದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋ ಜನವರಿ 29, 2025ರಂದು ತನ್ನ 100ನೇ ಉಡ್ಡಯನವನ್ನು ಯಶಸ್ವಿಯಾಗಿ ನಡೆಸಿದೆ. ಆಂಧ್ರಪ್ರದೇಶದ ಶ್ರೀಹರಿಕೋಟಾದಿಂದ ಎನ್'ವಿಎಸ್–02 ಉಪಗ್ರಹ ಹೊತ್ತ ಜಿಎಸ್‌ಎಲ್‌ವಿ ನಭಕ್ಕೆ ಜಿಗಿಯಿತು. ಈ ಮೂಲಕ ಸ್ವದೇಶಿ ಜಿಪಿಎಸ್ ಯೋಜನೆಯ ಭಾಗವಾಗಿ



ಎನ್'ವಿಎಸ್–02 ಉಪಗ್ರಹವನ್ನು ಇಸ್ರೋ ಯಶಸ್ವಿಯಾಗಿ ಉಡಾವಣೆ ಮಾಡಿದೆ. 100ನೇ ಉಡ್ಡಯನದೊಂದಿಗೆ ಇತಿಹಾಸ ಸೃಷ್ಟಿಸಿದೆ. ಈ ಎನ್'ವಿಎಸ್ ಸ್ಯಾಟಲೈಟ್ ಭಾರತದ ನ್ಯಾವಿಗೇಷನ್ (ಸ್ವದೇಶಿ ಜಿಪಿಎಸ್) ಉಪಗ್ರಹಗಳ ಜಾಲದ 2ನೇ ತಲೆಮಾರಿನ ಉಪಗ್ರಹವಾಗಿದೆ. ಇದು ಭಾರತೀಯ ಉಪಖಂಡ (ಜೊತೆಗೆ ಅದರಾಚೆಗಿನ 1500 ಕಿ.ಮೀ. ದೂರದವರೆಗೆ)ದ ಬಳಕೆದಾರರಿಗೆ ನಿಖರ ಸಮಯ, ಸ್ಥಾನ ಮತ್ತು ವೇಗವನ್ನು ನೀಡುವ ಗುರಿಯನ್ನು ಹೊಂದಿದೆ.

## ಭಾರತವು AIಗೆ ಪ್ರಮುಖ ಮಾರುಕಟ್ಟೆ: ಓಪನ್‌ಎಐ ಸಿಇಓ



ಭಾರತವು ಕೃತಕ ಬುದ್ಧಿಮತ್ತೆ ಮತ್ತು ಓಪನ್‌ಎಐಗೆ ಅತ್ಯಂತ ಮುಖ್ಯವಾದ ರಾಷ್ಟ್ರವಾಗಿದೆ. ಭಾರತವು ಪೂರ್ಣ ಸ್ಟ್ಯಾಕ್ ಮಾದರಿಯೊಂದಿಗೆ ಂಖ ಕ್ರಾಂತಿಯ ನಾಯಕನಲ್ಲಿ ಒಬ್ಬನಾಗಿರಬೇಕು ಎಂದು ಓಪನ್‌ಎಐ ಸಿಇಓ ಸ್ಯಾಮ್ ಆಲ್ಟ್‌ಮನ್ ಹೇಳಿದ್ದಾರೆ. ಐಟಿ ಸಚಿವ ಅಶ್ವಿನಿ ವೈಷ್ಣವ್ ಅವರೊಂದಿಗಿನ ಫೈರ್‌ಸೈಡ್ ಚಾಟ್‌ನಲ್ಲಿ ಮಾತನಾಡಿದ ಆಲ್ಟ್‌ಮನ್. ಕಳೆದ ವರ್ಷ ಓಪನ್‌ಎಐ ತನ್ನ ಬಳಕೆದಾರರನ್ನು ಮೂರು ಪಟ್ಟು ಹೆಚ್ಚಿಸಿದೆ. ಸ್ಟಾಕ್, ಚಿಪ್ಸ್, ಮಾದರಿಗಳು ಮತ್ತು ಅಪ್ಲಿಕೇಶನ್‌ಗಳು ಎಲ್ಲಾ ಹಂತಗಳಲ್ಲಿ ಂಖ ಅನ್ನು ನಿರ್ಮಿಸುವಲ್ಲಿ ಭಾರತದ ಪ್ರಯತ್ನಗಳಿಗೆ ಶ್ಲಾಘನೆ ವ್ಯಕ್ತಪಡಿಸಿದರು.

## 'ಜಲಯೋಧ'ನಾದ ಭುಲ್ಲು ಸಹಾನಿ ಎಂಬ ಸಾಹಸಿಗ

ಪ್ರೇರಣಾ

ಮನೋಬಲವಿದ್ದರೆ ಸಾಧನೆಗೆ ಯಾವುದೂ ಅಡ್ಡಿ ಬರುವುದಿಲ್ಲ. ತನಗಿಲ್ಲದಿದ್ದರೂ ಪರವಾಗಿಲ್ಲ, ತನ್ನ ಕೈಲಾದ ಸಹಾಯವನ್ನು ತಾನು ಸಮಾಜಕ್ಕಾಗಿ ಮಾಡಬೇಕು ಅನ್ನುವ ತುಡಿತವಿದ್ದರೆ ಸೇವೆ ಮಾಡುವುದು ಕಷ್ಟವೇನಲ್ಲ ಎಂಬುದನ್ನು ಭುಲ್ಲು ಸಹಾನಿ ನಿರೂಪಿಸಿ ಕೊಟ್ಟಿದ್ದಾರೆ. ತಾನು ಬಾಲ್ಯದಲ್ಲಿ ತನ್ನ ತಂದೆಯ ಮೂಲಕ ಕಲಿತ ಕೌಶಲ್ಯಗಳು ಇಂದು ಸಂಕಷ್ಟದಲ್ಲಿ ಸಿಲುಕಿದ ಜನರನ್ನು ಪ್ರಾಣಾಪಾಯದಿಂದ ಕಾಪಾಡಲು ಬಳಕೆಯಾಗುತ್ತಿದೆಯಲ್ಲದೇ ಅದುವೇ ಅವರ ಜೀವನೋಪಾಯವೂ ಆಗಿದೆ.

ಮೂಲತಃ ಬಿಹಾರದ ಸಮಷ್ಟಿಪುರ ಜಿಲ್ಲೆಯ ಪಟೋರಿ ಬ್ಲಾಕ್‌ನ ದುಮ್ ದುಮಾ ಗ್ರಾಮದ 35 ವರ್ಷದ ಭುಲ್ಲು ಸಹಾನಿ ಕಳೆದ ಕೆಲ ವರ್ಷಗಳಿಂದ ನೀರಿನಲ್ಲಿ ಕೊಚ್ಚಿ ಹೋಗುತ್ತಿರುವವರನ್ನು ರಕ್ಷಿಸುತ್ತಿದ್ದಾರೆ. ಹುಟ್ಟಿನಿಂದಲೇ ಅಂಧತ್ವದಿಂದಾಗಿ ಜಗತ್ತು ಕಾಣದ ಭುಲ್ಲು ಸಹಾನಿ ಗಂಗಾ, ಭಾಗಮತಿ, ಬೂಡಿ ಗಂಡಕ್ ಮತ್ತು ಕಮಲಾ ನದಿಗಳಲ್ಲಿ ಕೊಚ್ಚಿ ಹೋಗುತ್ತಿದ್ದ 13 ಜನರನ್ನು ರಕ್ಷಿಸಿದ್ದು, ಇದುವರೆಗೆ 14ಕ್ಕೂ ಹೆಚ್ಚು ಮೃತದೇಹಗಳನ್ನು ಪತ್ತೆ ಹಚ್ಚಿದ್ದಾರೆ.

ಮಲ್ಲಾಹ್ (ಮೀನುಗಾರ) ಜಾತಿಯಲ್ಲಿ ಹುಟ್ಟಿ ಬೆಳೆದ ಭೂಲ್ಲು ಅವರಿಗೆ ಅವರ ತಂದೆ ಕೈಲು ಸಾಹ್ನಿ ಅವರಿಗೆ ಎಳೆವಯಸ್ಸಿನಲ್ಲೇ ಈಜು ಮತ್ತು ಮೀನುಗಾರಿಕೆಯನ್ನು ಪರಿಚಯಿಸಿದರು. ಇದು ಭುಲ್ಲು ಅವರಲ್ಲಿ ವಿಶೇಷ ಇಚ್ಛಾಶಕ್ತಿಯನ್ನು ಬೆಳೆಸಿತು. ನಿರ್ಭಯವಾಗಿ ನದಿಗಳಲ್ಲಿ ಈಜುವ ಅಭ್ಯಾಸ ಬೆಳೆಸಿಕೊಂಡ ಭುಲ್ಲು ಇಂದು ನೀರಿನಲ್ಲಿ ಮುಳುಗಡೆಯಾಗುವವರನ್ನು ರಕ್ಷಿಸುವ ಜಲಯೋಧ ಆಗಿದ್ದಾರೆ. ದೃಷ್ಟಿ ಇದ್ದರೂ ಇನ್ನೊಬ್ಬರ ನೋವು ಕಾಣುವುದಿಲ್ಲ ಎಂಬ ರೀತಿಯಲ್ಲಿ ವರ್ತಿಸುವವರ ಮಧ್ಯೆ ಅಂತರ್ದೃಷ್ಟಿ ಇರುವ ಭುಲ್ಲು ಸಹಾನಿ ವಿಭಿನ್ನವಾಗಿ ಕಾಣಿಸಿಕೊಳ್ಳುತ್ತಾರೆ. ವಿಶಿಷ್ಟ ಈಜು ತಂತ್ರ ಮತ್ತು ನಿರ್ಭೀತ ವಿಧಾನವು ಬಿಕ್ಕಟ್ಟಿನ ಸಮಯದಲ್ಲಿ ಅವರನ್ನು ವಿಶ್ವಾಸಾರ್ಹ ಸಂರಕ್ಷಕನನ್ನಾಗಿ ಮಾಡಿದೆ. ಸಮಷ್ಟಿಪುರ ಜಿಲ್ಲೆಯಲ್ಲಿ ಯಾರೇ ನೀರಿನಲ್ಲಿ ಕೊಚ್ಚಿಹೋದರೂ ಗ್ರಾಮಸ್ಥರು ರಕ್ಷಣಾ ಕಾರ್ಯಾಚರಣೆಗೆ ಕರೆತರುವುದು ಭುಲ್ಲು ಸಹಾನಿ ಅವರನ್ನೇ! ಅಂತಹ ನಂಬಿಕಸ್ಥ ರಕ್ಷಕನಾಗಿ ಭುಲ್ಲು ಸಹಾನಿ ಗುರುತಿಸಿಕೊಂಡಿದ್ದಾರೆ.



"ನಾನು ನೋಡದಿದ್ದರೆ ಏನು ಸಮಸ್ಯೆ? ನನ್ನ ಕೌಶಲ್ಯವು ಯಾರಿಗಿಂತಲೂ ಕಡಿಮೆಯಿಲ್ಲ ಎಂಬ ನಂಬಿಕೆ ನನ್ನದು. ನಾನು ನೀರಿಗೆ ಇಳಿದಾಗ, ನಾನು ಮೃತ ದೇಹ ಅಥವಾ ಜೀವಂತ ವ್ಯಕ್ತಿಯನ್ನು ಸ್ಪಷ್ಟವಾಗಿ ಗ್ರಹಿಸಬಲ್ಲೆ ಮತ್ತು ಅವರನ್ನು ಸುರಕ್ಷಿತವಾಗಿ ಹೊರಗೆ ತರಬಲ್ಲೆ." – ಭುಲ್ಲು ಸಹಾನಿ

ಭುಲ್ಲು ಅವರ ಕೆಲಸವನ್ನು ಕಂಡು ಗ್ರಾಮಸ್ಥರು ನೀಡುವ 1500 ದಿಂದ 2000 ರೂಪಾಯಿಗಳು ತಮ್ಮ ಜೀವನಮಾರ್ಗವೆಂದು ಹೇಳುವ ಭುಲ್ಲು ಸಹಾನಿ ನೀರಿಗಿಳಿದರೆ ನೀರಿನ ಹರಿವು, ಏರಿಳಿತ ಅರ್ಥಮಾಡಿಕೊಳ್ಳುವುದಲ್ಲದೆ, ಮೃತ ದೇಹ ಅಥವಾ ಜೀವಂತ ವ್ಯಕ್ತಿಯನ್ನು ಸ್ಪಷ್ಟವಾಗಿ ಗ್ರಹಿಸಬಲ್ಲ ವಿಶೇಷ ಸಾಮರ್ಥ್ಯ ಹೊಂದಿದ್ದಾರೆ. ಒಂದೊಮ್ಮೆ ಅಂಧನೆಂದು ಕರೆಸಿಕೊಳ್ಳುತ್ತಿದ್ದ ಭುಲ್ಲು ಇಂದು ಜಲರಕ್ಷಕನೆಂದು ಕರೆಸಿಕೊಳ್ಳುತ್ತಾರೆ. ಅವರ ಅಚಲ ಧೈರ್ಯ ಮತ್ತು ಛಲವು ಅವರ ಬದುಕಿನ ಗುರಿಯನ್ನು ತೋರಿಸಿಕೊಟ್ಟಿದೆ. ತಮ್ಮ ಬದುಕು ಕತ್ತಲಾದರೂ, ಇತರರ ಬದುಕಿನಲ್ಲಿ ಬೆಳಕಾಗಿರುವ ಭುಲ್ಲು ಸಹಾನಿಯ ಕಥೆ ನಿಜಕ್ಕೂ ಪ್ರೇರಣಾದಾಯಕವಾಗಿದೆ. ತಮ್ಮ ಕೌಶಲ್ಯವನ್ನೇ ಸಮಾಜ ಹಿತದ ಸಾಧನವಾಗಿ ಬಳಸಿಕೊಳ್ಳಬಹುದು ಎಂಬ ಆದರ್ಶವನ್ನು ಈ ಮೂಲಕ ಕಟ್ಟಿಕೊಟ್ಟಿದ್ದಾರೆ.

## ಯುಎನ್ ನಿಯಮಿತ ಬಜೆಟ್‌ಗೆ 37.64 ಮಿಲಿಯನ್ ಯುಎಸ್ $ ನೀಡಿದ ಭಾರತ

ವಿಶ್ವಸಂಸ್ಥೆಯ ನಿಯಮಿತ ಬಜೆಟ್‌ಗೆ ಭಾರತವು 37.64 ಮಿಲಿಯನ್ ಯುಎಸ್ ಡಾಲರ್‌ಗಳನ್ನು ಕೊಡುಗೆಯಾಗಿ ನೀಡಿದೆ, ಈ ಮೂಲಕ ಬಾಕಿಗಳನ್ನು ಸಕಾಲಿಕವಾಗಿ ಮತ್ತು ಪೂರ್ಣವಾಗಿ ಪಾವತಿಸಿದ್ದಕ್ಕಾಗಿ ಗೌರವಿಸಲ್ಪಟ್ಟ 35 ಸದಸ್ಯ ರಾಷ್ಟ್ರಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಈ ಕೊಡುಗೆಯನ್ನು ಕಳೆದ ತಿಂಗಳು 31 ರಂದು ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರ ವಕ್ತಾರ ಸ್ಟೀಫನ್ ಡುಜಾರಿಕ್ ಅವರು ಸೋಮವಾರ ತಮ್ಮ ದೈನಂದಿನ ಪತ್ರಿಕಾಗೋಷ್ಠಿಯಲ್ಲಿ ಭಾರತದ ಸಕಾಲಿಕ ಕೊಡುಗೆಯನ್ನು ಶ್ಲಾಘಿಸಿದರು.

ವಿಶ್ವಸಂಸ್ಥೆಗೆ ತನ್ನ ಹಣಕಾಸಿನ ಬಾಧ್ಯತೆಗಳನ್ನು ಸಮಯಕ್ಕೆ ಮತ್ತು ಪೂರ್ಣವಾಗಿ ಪೂರೈಸುವ ಖ್ಯಾತಿಯನ್ನು ಭಾರತ ನಿರಂತರವಾಗಿ ಎತ್ತಿಹಿಡಿದಿದೆ. ಭಾರತದ ನಿರಂತರ ಬದ್ಧತೆಯು ವಿಶ್ವಸಂಸ್ಥೆಯ ಸದಸ್ಯತ್ವದ ತತ್ವಗಳು ಮತ್ತು ಜವಾಬ್ದಾರಿಗಳಿಗೆ ಅದರ ಸಮರ್ಪಣೆಯನ್ನು ಒತ್ತಿಹೇಳುತ್ತದೆ ಎಂದಿದ್ದಾರೆ.

ಭಾರತಕ್ಕೆ ಭೇಟಿ ನೀಡಿದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷ ಫಿಲೆಮನ್ ಯಾಂಗ್ ಅವರು ತಮ್ಮ ಸಂದರ್ಶನವೊಂದರಲ್ಲಿ ಭಾರತದ ವಿಶ್ವಾಸಾರ್ಹತೆಯನ್ನು ಶ್ಲಾಘಿಸಿದರು. ಅದರ ಜೊತೆಗೆ ದೇಶವು ತನ್ನ ಬಾಕಿಗಳನ್ನು ಪೂರ್ಣವಾಗಿ ಮತ್ತು ಸಮಯಕ್ಕೆ ಸರಿಯಾಗಿ ಪಾವತಿಸುವ ಮೂಲಕ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗಿ ತನ್ನ ಬಾಧ್ಯತೆಯನ್ನು ಪೂರೈಸುತ್ತಲೇ ಇದೆ ಎಂದು ಹೇಳಿದರು.

UN ಕೊಡುಗೆಗಳ ಸಮಿತಿಯ ಪ್ರಕಾರ, ಜನವರಿ 31, 2025ರ ಹೊತ್ತಿಗೆ, ಮೂವತ್ತೈದು ಸದಸ್ಯ ರಾಷ್ಟ್ರಗಳು UN ಹಣಕಾಸು ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ 30 ದಿನಗಳ ಅವಧಿಯೊಳಗೆ ತಮ್ಮ ನಿಯಮಿತ ಬಜೆಟ್ ಮೌಲ್ಯಮಾಪನಗಳನ್ನು ಪೂರ್ಣವಾಗಿ ಪಾವತಿಸಿವೆ.

पुंगव PUNGAVA
# 74, Ranga Rao Road, Shankarapuram, Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th FEBRUARY 2025
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-02-2025



## ಮಹಾಕುಂಭದಲ್ಲಿ ಪೊಲೀಸರಿಗೆ 16000 ಆರ್‌ಎಸ್‌ಎಸ್ ಸ್ವಯಂಸೇವಕರ ನೆರವು

ಪ್ರಯಾಗರಾಜ್ ಮಹಾಕುಂಭಮೇಳದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಸೇರುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) 16 ಸಾವಿರ ಕಾರ್ಯಕರ್ತರು ಸಂಚಾರ ವ್ಯವಸ್ಥೆಯನ್ನು ಸುಗಮವಾಗಿ ನಡೆಸುವ ಕಾರ್ಯವನ್ನು ಸ್ವತಃ ಕೈಗೊಂಡಿದ್ದಾರೆ. ಈ ಸ್ವಯಂಸೇವಕರು ಮೇಳ ಪ್ರದೇಶದ ವಿವಿಧ ಸಂದಿಗಳು ಮತ್ತು ರಸ್ತೆಗಳಲ್ಲಿ, ಮೇಳಕ್ಕೆ ಬರುವ ಭಕ್ತರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ ಮತ್ತು ಟ್ರಾಫಿಕ್ ನಿಯಂತ್ರಿಸುವಲ್ಲಿ ಪೊಲೀಸರಿಗೆ ಸಹಾಯ ಮಾಡುತ್ತಿದ್ದಾರೆ. ಕಳೆದ ಹಲವು ದಿನಗಳಿಂದ ಸಂಘದ ಸ್ವಯಂಸೇವಕರು ಮಹಾಕುಂಭದ ಸಿದ್ಧತೆಯಲ್ಲಿ ನಿರತರಾಗಿದ್ದಾರೆ. ಮೇಳ ಪ್ರದೇಶದಲ್ಲಿ ಸಂಚಾರ ವ್ಯವಸ್ಥೆ ಸುಧಾರಿಸಲು ಸ್ವಯಂಸೇವಕರಿಗೆ ವಿಶೇಷ ತರಬೇತಿಯನ್ನೂ ನೀಡಲಾಗಿದೆ. ಈ ಸ್ವಯಂಸೇವಕರು ಪೊಲೀಸರೊಂದಿಗೆ ಸೇರಿ ಕೆಲಸ ಮಾಡುತ್ತಿದ್ದಾರೆ ಮತ್ತು ಭಕ್ತರಿಗೆ ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುತ್ತಿದ್ದಾರೆ.

ಮಹಾಕುಂಭಕ್ಕೆ ಬರುವ ಭಕ್ತರ ಸಂಖ್ಯೆ ಗಮನಿಸಿದರೆ ಸಂಚಾರ ವ್ಯವಸ್ಥೆಯೇ ದೊಡ್ಡ ಸವಾಲಾಗಿದೆ ಎನ್ನುತ್ತಾರೆ ಸಂಘದ ಕಾರ್ಯಕರ್ತರು. ಇಂತಹ ಪರಿಸ್ಥಿತಿಯಲ್ಲಿ ಆರೆಸ್ಸೆಸ್ ಕಾರ್ಯಕರ್ತರ ಈ ಪಾತ್ರ ಬಹಳ ಮುಖ್ಯವಾಗುತ್ತದೆ. ಸ್ವಯಂಸೇವಕರ ಉಪಸ್ಥಿತಿಯಿಂದ ಭಕ್ತರಿಗೆ ಸಾರಿಗೆ ಅನುಕೂಲವಾಗಲಿದ್ದು, ಸಂಚಾರವೂ ಸುಗಮವಾಗಲಿದೆ. ಇದಲ್ಲದೆ, ಆರ್‌ಎಸ್‌ಎಸ್ ಸ್ವಯಂಸೇವಕರು ಜಾತ್ರೆಯ ಪ್ರದೇಶದಲ್ಲಿ ಸ್ವಚ್ಛತೆ, ಆರೋಗ್ಯ ಮತ್ತು ಇತರ ಪ್ರಮುಖ ಸೇವೆಗಳಿಗೆ ಕೊಡುಗೆ ನೀಡುತ್ತಾರೆ. ಸಂಘವು ಮಹಾಕುಂಭ ರಾಷ್ಟ್ರೀಯ ಕಾರ್ಯಕ್ರಮವಾಗಿದೆ ಮತ್ತು ಪ್ರತಿಯೊಬ್ಬರೂ ಇದಕ್ಕೆ ಕೊಡುಗೆ ನೀಡಬೇಕು ಎಂದು ಕರೆ ನೀಡಿದೆ.



## ಸನಾತನ ಹಿಂದೂ ಧರ್ಮ ರಾಷ್ಟ್ರೀಯ ಧರ್ಮ: ಯೋಗಿ ಆದಿತ್ಯನಾಥ್




ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಬೃಹತ್ ಧಾರ್ಮಿಕ ಕಾರ್ಯಕ್ರಮವಾದ ಮಹಾಕುಂಭವು ಯಾವುದೇ ಒಂದು ಜಾತಿ ಅಥವಾ ಧರ್ಮಕ್ಕೆ ಮೀಸಲಾಗಿಲ್ಲ, ಇದು ಎಲ್ಲಾ ಧರ್ಮ, ಸಂಸ್ಕೃತಿ ಮತ್ತು ಪಂಥಗಳ ಮಹಾನ್ ಸಮ್ಮಿಲನವಾಗಿದೆ. ನಾನು ಈ ಮೊದಲು ಇದನ್ನೇ ಹೇಳಿದ್ದೆ ಈಗಲೂ ಹೇಳುತ್ತೇನೆ ಹಿಂದೂ ಧರ್ಮ ರಾಷ್ಟ್ರೀಯ ಧರ್ಮ" ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮಹಾಕುಂಭದ ಸಂವಾದದ ವಿಶೇಷ ಸಂದರ್ಶನದಲ್ಲಿ ಹೇಳಿದರು. ಸನಾತನ ಧರ್ಮವು ಭಾರತದ ರಾಷ್ಟ್ರೀಯ ಧರ್ಮ. ಅದು ಮಾನವೀಯತೆಯ ಧರ್ಮ. ಪೂಜಾ ಪ್ರಕ್ರಿಯೆಯು ವಿಭಿನ್ನವಾಗಿರಬಹುದು. ಕುಂಭವು ಆ ಸನಾತನ ಧರ್ಮದ ಪ್ರತಿನಿಧಿಯಾಗಿದೆ. ದೇಶದ ಅತ್ಯಂತ ಪವಿತ್ರ ಸ್ಥಳಗಳಲ್ಲಿ ಒಂದೆಂದು ಪರಿಗಣಿಸಲಾದ ಪ್ರಯಾಗರಾಜ್‌ನಲ್ಲಿರುವ ಸಂಗಮವು ಗಂಗಾ, ಯಮುನಾ ಮತ್ತು ಸರಸ್ವತಿಯ ಸಂಗಮವಾಗಿದೆ. ಏಕತೆಯ ಸಂದೇಶವನ್ನು ಮಹಾ ಕುಂಭದಿಂದ ನೀಡಲಾಯಿತು. ಯಾವುದೇ ತಾರತಮ್ಯವಿರಲಿಲ್ಲ. ಸನಾತನ ಧರ್ಮವನ್ನು ಟೀಕಿಸುತ್ತಿದ್ದ ಜನರು, ಧೃತರಾಷ್ಟ್ರರಾಗಬೇಡಿ, ನೀವೇ ಸ್ವತಃ ನೋಡಲು ಬನ್ನಿ ಎಂದರು.

## ಭಾರತದ ಹಣ್ಣು ಮತ್ತು ತರಕಾರಿ ರಫ್ತಿನಲ್ಲಿ ಶೇಕಡಾ 47.3 ರಷ್ಟು ಏರಿಕೆ

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಪ್ರಕಾರ, ಭಾರತವು 2019-20 ಮತ್ತು 2023-24ರ ನಡುವೆ ಹಣ್ಣು ಮತ್ತು ತರಕಾರಿ ರಫ್ತಿನಲ್ಲಿ ಶೇಕಡಾ 47.3 ರಷ್ಟು ಏರಿಕೆಯನ್ನು ದಾಖಲಿಸಿದೆ. ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (APEDA) ವಿವಿಧ ರಫ್ತು ಉತ್ತೇಜನ ಕಾರ್ಯಕ್ರಮಗಳ ಅಡಿಯಲ್ಲಿ ಹಣಕಾಸಿನ ನೆರವು ನೀಡುವ ಮೂಲಕ ಈ ವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. "APEDAದ ಆರ್ಥಿಕ ನೆರವು ಯೋಜನೆಗಳು ಭಾರತದ ಹಣ್ಣು ಮತ್ತು ತರಕಾರಿ ರಫ್ತಿನಲ್ಲಿ ಶೇಕಡಾ 47.3 ರಷ್ಟು ಏರಿಕೆಯನ್ನು ಮಾಡಿವೆ" ಎಂದು ಸಚಿವಾಲಯವು ವರದಿಯಲ್ಲಿ ತಿಳಿಸಿದೆ. ಕೃಷಿ ಮತ್ತು ಸಂಸ್ಕರಿಸಿದ ಆಹಾರ ರಫ್ತು ಉತ್ತೇಜನ ಯೋಜನೆಯಡಿಯಲ್ಲಿ, ಒಕಇಅಂ ಪ್ಯಾಕ್‌ಹೌಸ್‌ಗಳು, ಗ್ರೇಡಿಂಗ್ ಘಟಕಗಳು, ಪೂರ್ವ-ಕೂಲಿಂಗ್ ಕೋಣೆಗಳು, ಕೋಲ್ಡ್ ಸ್ಟೋರೇಜ್ ಮತ್ತು ತಾಪಮಾನ-ನಿಯಂತ್ರಿತ ಸಾರಿಗೆಯನ್ನು ಅಭಿವೃದ್ಧಿಪಡಿಸಲು ಹಣಕಾಸಿನ ನೆರವು ನೀಡುತ್ತದೆ. ಇದು ಅಂತರರಾಷ್ಟ್ರೀಯ ಗುಣಮಟ್ಟದ ಮಾನದಂಡಗಳನ್ನು ಪೂರೈಸಲು ಬಿಸಿನೀರಿನಲ್ಲಿ ಮುಳುಗಿಸುವುದು, ಆವಿ ಶಾಖ ಚಿಕಿತ್ಸೆ ಮತ್ತು ವಿಕಿರಣದಂತಹ ಸಂಸ್ಕರಣಾ ವಿಧಾನಗಳನ್ನು ಸಹ ಬೆಂಬಲಿಸುತ್ತದೆ. ಉತ್ಪನ್ನದ ಗುಣಮಟ್ಟವನ್ನು ಸುಧಾರಿಸಲು, ಒಕಇಅಂ ಪ್ರಯೋಗಾಲಯ ಪರೀಕ್ಷಾ ಉಪಕರಣಗಳು, ಗುಣಮಟ್ಟ ನಿಯಂತ್ರಣ ವ್ಯವಸ್ಥೆಗಳು ಮತ್ತು ಕೃಷಿ ಮಟ್ಟದ ಡೇಟಾವನ್ನು ಮೇಲ್ವಿಚಾರಣೆ ಮಾಡಲು ಪೋರ್ಟಬಲ್ ಸಾಧನಗಳಿಗೆ ಹಣಕಾಸು ಒದಗಿಸುತ್ತದೆ. ಹೆಚ್ಚುವರಿ ಕ್ರಮಗಳಲ್ಲಿ ಆಮದು ಮಾಡಿಕೊಳ್ಳುವ ದೇಶಗಳ ಸುರಕ್ಷತಾ ಪ್ರೋಟೋಕಾಲ್‌ಗಳಿಗೆ ಅನುಗುಣವಾಗಿ ಮಣ್ಣು, ನೀರು ಮತ್ತು ಕೀಟನಾಶಕಗಳ ಪರೀಕ್ಷೆಯೂ ಸೇರಿದೆ.

## ಕುಂಭಮೇಳ : ಮೃತರ ಆಭರಣಗಳನ್ನು ತಲುಪಿಸಿದ ಯುಪಿ ಸರ್ಕಾರದ ಪ್ರಾಮಾಣಿಕತೆಗೆ ಮೆಚ್ಚುಗೆ

ಕುಂಭಮೇಳದಲ್ಲಿ ಉಂಟಾದ ಕಾಲ್ತುಳಿತದಲ್ಲಿ ಬೆಳಗಾವಿಯ ನಾಲ್ವರು ಸಾವನ್ನಪ್ಪಿದ್ದರು. ಅದರ ನಂತರ ಉತ್ತರ ಪ್ರದೇಶ ಸರ್ಕಾರ ಕುಟುಂಬಸ್ಥರ ಜೊತೆಗೆ ನಿಂತ ಪರಿಯನ್ನು ಗಮನಿಸಿದ ಅವರ ಕುಟುಂಬದ ಸದಸ್ಯರೊಬ್ಬರು ಯುಪಿ ಸರ್ಕಾರದ ವ್ಯವಸ್ಥೆಯ ಪಾರದರ್ಶಕತೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಬೆಳಗಾವಿಯ ವಡಗಾವಿ ನಿವಾಸಿ ಜ್ಯೋತಿ ಹತ್ತರವಾತ(50) ಮತ್ತು ಅವರ ಮಗಳು ಮೇಘಾ(18) ಹತ್ತರವಾತ ಕಾಲ್ತುಳಿತದಲ್ಲಿ ಸಾವನ್ನಪ್ಪಿದ್ದರು. ಜ್ಯೋತಿ ಹತ್ತರವಾತ ಅವರ ಸಹೋದರ ಗುರುರಾಜ್ ಹುದ್ದಾರ್ ಸಾಮಾಜಿಕ ಜಾಲತಾಣದಲ್ಲಿ "ನನ್ನ ಅಕ್ಕ ಹಾಗೂ



ಅಕ್ಕನ ಮಗಳು ಕಾಲ್ತುಳಿತದಲ್ಲಿ ತೀರಿಹೋದರು ಅವರ ಶವಗಳ ಜೊತೆಗೆ ಅವರು ಧರಿಸಿದ ಎಲ್ಲಾ ಆಭರಣಗಳು 1600 ಕಿ.ಮೀ ದೂರದ ನಮ್ಮ ಮನೆಗೆ ಬಂದು ಸೇರಿದವು. ಇದು ಪ್ರಾಮಾಣಿಕತೆಯ ಉದಾಹರಣೆ ಜೊತೆಗೆ ವ್ಯವಸ್ಥೆ ಎಷ್ಟು ಅಚ್ಚುಕಟ್ಟಾಗಿದೆ ಎನ್ನುವುದನ್ನು ಹೇಳುತ್ತಿದೆ" ಎಂದು ಬರೆದುಕೊಂಡಿದ್ದಾರೆ. ಗುರುರಾಜ್ ಹುದ್ದಾರ್ ಕಾಮೆಂಟ್‌ನ ಸ್ಕ್ರೀನ್‌ಶಾಟ್ ಎಲ್ಲೆಡೆ ವೈರಲ್ ಆಗತೊಡಗಿದ್ದು, ಯೋಗಿ ಆದಿತ್ಯನಾಥ್ ಸರ್ಕಾರದ ಕಾರ್ಯವೈಖರಿಯ ಕುರಿತು ಮೆಚ್ಚುಗೆಯ ಮಾತು ಕೇಳಿಬರುತ್ತಿದೆ.

## 20000 ಸಸಿ ನೆಡಲಿದೆ ನಮ್ಮ ಮೆಟ್ರೋ



ನಮ್ಮ ಮೆಟ್ರೋದ 2ಎ, 2ಬಿ ಹಂತದ ಯೋಜನೆಗಾಗಿ ಕಡಿದ 7252 ಮರಗಳಿಗೆ ಪರ್ಯಾಯವಾಗಿ ನಗರದ ಹೊರವಲಯದಲ್ಲಿ ರೂ.5.28 ಕೋಟಿ ವೆಚ್ಚದಲ್ಲಿ 20 ಸಾವಿರ ಸಸಿಗಳನ್ನು ನೆಡಲು ಬೆಂಗಳೂರು ಮೆಟ್ರೋ ರೈಲು ನಿಗಮ (ಬಿಎಂಆರ್‌ಸಿಎಲ್) ಮುಂದಾಗಿದೆ. ನಮ್ಮ ಮೆಟ್ರೊ ಯೋಜನೆಗಳಿಗಾಗಿ 2021 –2023 ಅವಧಿಯಲ್ಲಿ 3,626 ಮರಗಳನ್ನು ಕತ್ತರಿಸಲಾಗಿದೆ. 2021ರಿಂದ 2022 ರವರೆಗೆ 856 ಮರಗಳನ್ನು ನಗರದ ವಿವಿಧ ಭಾಗ ಮತ್ತು ಹೊರವಲಯಕ್ಕೆ ಸ್ಥಳಾಂತರ ಮಾಡಲಾಗಿದೆ. ಹಂತ – 2 ಮತ್ತು ಹಂತ 2 'ಎ' ಯೋಜನೆಗಳಿಗಾಗಿ 2,461 ಮರಗಳನ್ನು ಕಡಿಯಲಾಗಿದೆ. ಅದೇ ರೀತಿ, 2022ರಿಂದ ಜನವರಿ 2023ರವರೆಗೆ ಹಂತ 2ಎ, 2ಬಿಗಾಗಿ 107 ಮರ ಸ್ಥಳಾಂತರಿಸಲಾಗಿದೆ ಮತ್ತು 1,165 ಕಡಿಯಲಾಗಿದೆ. 1,193 ಮರಗಳನ್ನು ಮರಗಳನ್ನು ಯಶಸ್ವಿಯಾಗಿ ನಮ್ಮ ಮೆಟ್ರೋ ಸ್ಥಳಾಂತರಿಸಲಾಗಿತ್ತು. ಇದೀಗ ತಲಾ ₹ 1.32 ಕೋಟಿ ವೆಚ್ಚದಲ್ಲಿ 4 ಹಂತದಲ್ಲಿ ಬೆಂಗಳೂರು ಗ್ರಾಮಾಂತರದ ವಿವಿಧೆಡೆ 20,000 ಸಸಿಗಳನ್ನು ನೆಡಲು ಬಿಎಂಆರ್‌ಸಿಎಲ್ ಮುಂದಾಗಿದೆ. 3 ವರ್ಷ 4 ತಿಂಗಳುಗಳ ಕಾಲ ನಿರ್ವಹಣೆ ಮಾಡುವ ಷರತ್ತನ್ನು ಒಳಗೊಂಡು ಟೆಂಡರ್ ಕರೆದಿದೆ. ದೊಡ್ಡಬಳ್ಳಾಪುರ, ಕೆಐಎಡಿಬಿ ಪಾರ್ಕ್, ಐಟಿಐಆರ್ ಕೆಐಎಡಿಬಿ ಬಫರ್ ಝೋನ್, ಹಾರೋಹಳ್ಳಿ ಸುತ್ತಮುತ್ತ ಹಾಗೂ ಸರ್ಕಾರದ ವಿವಿಧ ಜಾಗಗಳಲ್ಲಿ ಈ ಸಸಿಗಳನ್ನು ನೆಡಲು ಬಿಎಂಆರ್‌ಸಿಎಲ್ ಯೋಜಿಸಿದೆ.

## 17 ಧಾರ್ಮಿಕ ನಗರಗಳಲ್ಲಿ ಮದ್ಯ ನಿಷೇಧ: ಮಧ್ಯಪ್ರದೇಶ ಸಿಎಂ ಘೋಷಣೆ



ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ರಾಜ್ಯದಾದ್ಯಂತ 17 ಧಾರ್ಮಿಕ ನಗರಗಳು ಮತ್ತು ಪಟ್ಟಣಗಳಲ್ಲಿ ಎಲ್ಲಾ ರೀತಿಯ ಮದ್ಯ ಮಾರಾಟದ ಮೇಲೆ ಸಂಪೂರ್ಣ ನಿಷೇಧವನ್ನು ಜಾರಿಗೊಳಿಸಲಾಗುವುದು ಎಂದು ಘೋಷಿಸಿದ್ದಾರೆ. ನರ್ಮದಾ ನದಿಯ ಎರಡೂ ಬದಿಗಳಲ್ಲಿ ಐದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಮದ್ಯ ನಿಷೇಧದ ಸರ್ಕಾರದ ಹಿಂದಿನ ನೀತಿಯು ಮುಂದುವರಿಯುತ್ತದೆ. ಹಾಗೆಯೇ ಸಂವಿಧಾನ ಶಿಲ್ಪಿಯ ಜನ್ಮಸ್ಥಳವಾದ ಮಹೌನಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಸಮಾಜ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಕಾನೂನು ವಿಭಾಗವನ್ನು ಸ್ಥಾಪಿಸಲು ?25 ಕೋಟಿಗೆ ಸಂಪುಟ ಅನುಮೋದನೆ ನೀಡಿದೆ. ವಿಶ್ವವಿದ್ಯಾನಿಲಯವನ್ನು 'ಶ್ರೇಷ್ಠತೆಯ ಕೇಂದ್ರ'ವಾಗಿ ಅಭಿವೃದ್ಧಿಪಡಿಸಲಾಗುವುದು.

ಮುಖ್ಯಮಂತ್ರಿಗಳ ಪ್ರಕಾರ, ಮದ್ಯದಂಗಡಿಗಳನ್ನು ಮುಚ್ಚುವ ಪ್ರದೇಶಗಳೆಂದರೆ: ದಾತಿಯಾ, ಪನ್ನಾ, ಮಂಡ್ಲಾ, ಮುಲ್ತಾಯಿ, ಮಂದ್‌ಸೌರ್, ಮೈಹಾರ್, ಓಂಕಾರೇಶ್ವರ್, ಮಹೇಶ್ವರ್, ಮಂಡ್ಲೇಶ್ವರ್, ಓರ್ಛಾ, ಚಿತ್ರಕೂಟ್, ಅಮರಕಂಟಕ್, ಸಲ್ಕಾನ್‌ಪುರ್, ಬರ್ಮನ್ ಕಾಲಾ, ಲಿಂಗ, ಕುಂದಲ್‌ಪುರ್, ಬಂಡಕ್‌ಪುರ ಮತ್ತು ಬರ್ಮನ್‌ಪುರ್.

ಮಧ್ಯಪ್ರದೇಶದಲ್ಲಿ ಮದ್ಯಪಾನವನ್ನು ಸಂಪೂರ್ಣವಾಗಿ ಕೊನೆಗೊಳಿಸಲು ಇದು ಕೇವಲ 'ಮೊದಲ ಹೆಜ್ಜೆ'. ಆಧ್ಯಾತ್ಮಿಕ ಸ್ಥಳಗಳಲ್ಲಿ ಮದ್ಯ ನಿಷೇಧದ ದೊಡ್ಡ ನಿರ್ಧಾರದತ್ತ ನಾವು ಸಾಗುತ್ತಿದ್ದೇವೆ. ಮದ್ಯ ವ್ಯಸನವು ಕುಟುಂಬದಲ್ಲಿ ಬಹಳಷ್ಟು ಸಮಸ್ಯೆಗಳನ್ನು ಉಂಟುಮಾಡುತ್ತದೆ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಉತ್ತಮ ಆಡಳಿತವನ್ನು ತರಲು ನಾವು ಪ್ರಯತ್ನಿಸುತ್ತಿದ್ದೇವೆ. ಮಹಿಳೆಯರು, ಮಕ್ಕಳು, ರೈತರು ಮತ್ತು ಎಲ್ಲರೂ ಉತ್ತಮ ಜೀವನವನ್ನು ನಡೆಸಬೇಕೆಂದು ನಾವು ಬಯಸುತ್ತೇವೆ ಎಂದು ಅವರು ತಿಳಿಸಿದರು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.